ಸಿದ್ಧಗಂಗಾ

ಮಾರ್ಚ್ ೧೯೬೭

ಐದು ವರ್ಷಗಳ ಸಾಧನೆಯ ಕಾಣಿಕೆಯೊಂದಿಗೆ ಜನತೆಗೆ ಯುಗಾದಿಯ ಶುಭಾಶಗಳು

ಪೈಂಗಳನಾಮ ಹೊಸ ಸಂವತ್ಸರ ಉದಯಿಸುವ ಈ ಶುಭ ದಿನದಂದು ಕರ್ನಾಟಕ ರಾಜ್ಯ ಕಳೆದೈದು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ಪಕ್ಷಿನೋಟ

- ನಾಲ್ಕು ಲಕ್ಷ ಹೆಕ್ಟೇರ್ ಹೆಚ್ಚುವರಿ ಭೂಮಿಗೆ ನೀರಾವರಿ ಸೌಲಭ್ಯ.
- ಆಹಾರ ಧಾನ್ಯಗಳ ಸಂಗ್ರಹಣೆ ಮತ್ತು ಹಂಚಿಕೆಯ ಸುವ್ಯವಸ್ಥೆ, ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆಯುಳ್ಳ ಪಟ್ಟಣಗಳಲ್ಲಿರುವ ಅನೌಪಚಾರಿಕ ಪಡಿತರ ಪದ್ಧತಿ ವ್ಯವಸ್ಥೆಯನ್ನು ಇನ್ನು ಮುಂದೆ 40 ಸಾವಿರಕ್ಕೂ ಅಧಿಕ ಜನಸಂಖ್ಯೆಯುಳ್ಳ ಪಟ್ಟಣಗಳಿಗೂ ವಿಸ್ತರಿಸಲಾಗುವುದು.
- ಪ್ರಗತಿಪರ ಭೂ ಸುಧಾರಣಾ ಕಾಯಿದೆಯ ಅನುಷ್ಠಾನ; ಪರಿಣಾಮವಾಗಿ ಒಂದೂವರೆ ಲಕ್ಷ ಗೇಣಿದಾರರಿಗೆ ತಾವು ಉಳುತ್ತಿದ್ದ ಭೂಮಿಯ ಒಡೆತನ.
- ಮುಪ್ಪಿನಲ್ಲಿ ಆಸರೆ ಇಲ್ಲದ 1.5 ಲಕ್ಷ ಜನರಿಗೆ ವೃದ್ಧಾಪ್ಯವೇತನದ ಸೌಲಭ್ಯ.
- ಸಣ್ಣ ರೈತರು ಕೃಷಿ ಕಾರ್ಮಿಕರು ಹಾಗೂ ಸಮಾಜದ ದುರ್ಬಲವರ್ಗಕ್ಕೆ ಸೇರಿದ 1,28,500 ಜನತೆಯ ಎಂಟು ಕೋಟಿ ರೂಗಳ ಗ್ರಾಮಾಂತರ ಋಣಭಾರ ವಿಮೋಚನೆ.
- ಮಾನವತೆಗೇ ಕಳಂಕ ಪ್ರಾಯವಾದ ಜೀತ ಪದ್ಧತಿ ನಿರ್ಮೂಲನ.
- ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮದನ್ವಯ 29 ಕೋಟಿ ರೂಗಳ ಯೋಜನೆ.
- ಹರಿಜನ ಗಿರಿಜನರ ಕ್ಷೇಮಾಭ್ಯುದಯಕ್ಕಾಗಿ ಪ್ರತ್ಯೇಕ ಕಾರ್ಪೊರೇಷನ್; ಉಚಿತ ವಕೀಲಿ ನೆರವು, ಅಸ್ಪೃಶ್ಯತಾ ನಿವಾರಣಾ ಶಾಸನದ ತೀವ್ರ ಅನುಷ್ಠಾನ ಇತ್ಯಾದಿ ಹತ್ತಾರು ದಿಟ್ಟ ಕ್ರಮಗಳ ಕಾರ್ಯಾಚರಣೆ.
- ಕೈಮಗ್ಗ ಅಭಿವೃದ್ಧಿಗಾಗಿ 80 ಲಕ್ಷ ರೂಗಳ ತೀವ್ರ ಕಾರ್ಯಕ್ರಮ.
- 7.22 ಲಕ್ಷ ಜನರಿಗೆ ಉಚಿತ ನಿವೇಶನ ನೀಡಿಕೆ; ಜನತಾಗೃಹ ನಿರ್ಮಾಣ ಯೋಜನೆಯನ್ವಯ ಮಂಜೂರಾದ 75 ಸಾವಿರ ಮನೆಗಳಲ್ಲಿ 44 ಸಾವಿರ ಮನೆಗಳ ನಿರ್ಮಾಣ.
- ಸರ್ಕಾರಿ ಮತ್ತು ಖಾಸಗಿ ಉದ್ಯಮಗಳು ಹಾಗೂ ಸರ್ಕಾರಿ ಸಹಾಯ ಪಡೆವ ಸಂಸ್ಥೆಗಳಲ್ಲಿ ಹಿಂದುಳಿದವರಿಗಾಗಿ ಶೇಕಡಾ 40 ರಷ್ಟು ಉದ್ಯೋಗಗಳ ಮೀಸಲು.

ಕರ್ನಾಟಕ ಸರಕಾರದ,

ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಪ್ರಕಟಿತ



ಶ್ರೀವಾಣಿ

ದೇಶ ಬೆಳೆಯಲು ಪ್ರಗತಿ ಹೊಂದಲು ಹೆಣ್ಣುಮಕ್ಕಳೂ ತಮ್ಮ ಪಾಲಿನ ಕಾಣಿಕೆಯನ್ನು ಸಲ್ಲಿಸುವುದರಲ್ಲಿ ಹಿಂದೆ ಬೀಳಬಾರದು. ಜಗತ್ತಿನಲ್ಲಿ ದೊಡ್ಡ ದೊಡ್ಡ ಮಹಾನುಭಾವರು ಅಂತಹ ದೊಡ್ಡ ಮಟ್ಟಕ್ಕೆ ಏರಬೇಕಾದರೆ ಕೆಲವರಿಗೆ ಪೂಜ್ಯ ಮಾತೆಯರೂ, ಕೆಲವರಿಗೆ ಧರ್ಮಪತ್ನಿಯರೂ, ಮತ್ತೆ ಕೆಲವರಿಗೆ ಸಹೋದರಿಯರೂ ಹಿಂದೆ ನಿಂತು ಎಲೆ ಮರೆಯ ಕಾಯಿಯಂತೆ ದುಡಿದಿದ್ದಾರೆ. ಪಾಂಡವರು, ಶಂಕರಾಚಾರ್ಯರು, ಚೈತನ್ಯದೇವ, ಶಿವಾಜಿ, ವಿವೇಕಾನಂದರು, ಗಾಂಧೀಜಿ, ನೆಹರೂ ಮುಂತಾದವರ ಬದುಕನ್ನು ನೋಡಿದಾಗ ಸ್ತ್ರೀ ಶಕ್ತಿ ಜಗತ್ತಿನಲ್ಲಿ ಎಂತಹ ಪಾತ್ರ ವಹಿಸಬಲ್ಲುದು ಎಂಬ ಅರಿವುಂಟಾಗುತ್ತದೆ. ಸೀತೆ, ಸಾವಿತ್ರಿ, ದಮಯಂತಿ, ಅನಸೂಯಾ, ಕಸ್ತೂರಿಬಾಯಿ ಮುಂತಾದ ಸತಿ ಶಿರೋಮಣಿಗಳೂ, ಮೈತ್ರೇಯಿ, ಅಕ್ಕಮಹಾದೇವಿ ಆಂಡಾಳ್, ಭಕ್ತಮೀರಾ ಮುಂತಾದ ವಿರಕ್ತ ಸಾಧ್ವೀಮಣಿಗಳೂ, ಝಾನ್ಸಿರಾಣಿ, ಕಿತ್ತೂರು ಚೆನ್ನಮ್ಮ ಓಬವ್ವೆ ಮುಂತಾದ ರಣಧೀರೆಯರೂ ಜಗತ್ತಿನಲ್ಲೇ ವಿಶಿಷ್ಟವಾದ ಸ್ತ್ರೀ ಪರಂಪರೆಯ ಸಂಸ್ಕೃತಿಯನ್ನು ಭಾರತದಲ್ಲಿ ಬಿಟ್ಟು ಹೋಗಿದ್ದಾರೆ. ಅಂತಹ ಅಮೂಲ್ಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಗುರುತರ ಜವಾಬ್ದಾರಿ ನಮ್ಮ ಇಂದಿನ ಹೆಣ್ಣುಮಕ್ಕಳ ಮೇಲೆ ಬಿದ್ದಿದೆ. ಆದ್ದರಿಂದ ಅವರು ತ್ಯಾಗ, ಭಕ್ತಿ, ಶ್ರದ್ಧೆ, ಸೇವಾ ಮನೋಭಾವ ಇವುಗಳಿಂದ ದೇಶ ಕಟ್ಟುವ ಮಹಾನುಭಾವರನ್ನು ಜಗತ್ತಿಗೆ ಕಾಣಿಕೆ ನೀಡುವ ಕರ್ತವ್ಯದಲ್ಲಿ ಸಹಭಾಗಿಗಳಾಗಬೇಕು. ಆಗ ಮಾತ್ರ ದೇಶ ತನ್ನ ಘನತೆಯನ್ನು ಉಳಿಸಿಕೊಂಡು ಪ್ರಗತಿ ಪಥದತ್ತ ಮುನ್ನಡೆಯಲು ಸಹಾಯಕವಾಗುತ್ತದೆ. ಅಂತೆಯೇ ಪುರುಷರು ದೇವತಾ ಸಮಾನಳಾದ ಸ್ತ್ರೀಯನ್ನು ಗೌರವಿಸುವುದನ್ನೂ ಕಲಿಯಬೇಕು. “ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ” ಎಂಬ ಆರ್ಯೋಕ್ತಿಯೂ ಇದೇ ಅಭಿಪ್ರಾಯವನ್ನು ಸೂಸುತ್ತದೆ.

'ಸಿದ್ಧಗಂಗಾ'

ಮಾರ್ಚ್, ೧೯೭೭

ಸಂಪುಟ–೧೩ ಸಂಚಿಕೆ–೩

ಪ್ರಕಾಶಕರು
ಹೆಚ್. ಬಿ. ಗಂಗಾಧರಯ್ಯ
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

ಸಂಪಾದಕರು
ಪಂ|| ಚನ್ನಪ್ಪ ಎರೇಸೀಮೆ
ಕೆ. ಜಿ. ರಂಗಯ್ಯ

ಜಾಹೀರಾತು ವ್ಯವಸ್ಥಾಪಕರು
ಎಂ. ರೇಣುಕಾರಾಧ್ಯ

ಮುದ್ರಕರು
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ

ಪ್ರಕಟನೆಯ ಸ್ಥಳ
ಶ್ರೀ ಸಿದ್ಧಗಂಗಾ ಕ್ಷೇತ್ರ

ಚಂದಾ ವಿವರ

ವಾರ್ಷಿಕ ಚಂದಾ: 10 ರೂ
ಆಜೀವ ಸದಸ್ಯತ್ವ: 101 ರೂ

ಈ ಸಂಚಿಕೆಯಲ್ಲಿ

ಶ್ರೀವಾಣಿ 3
ನವನೀತ ಅಮೃತ ಬಿಂದು 5
ಸತ್ಯಶೋಧನೆ 6
ಶ್ರೀ ಶರಣ ಬಸವೇಶ್ವರರು 7
ಶ್ರೀ ಅರವಿಂದರ ಆಧ್ಯಾತ್ಮಿಕ ಜೀವನ 11
ಶ್ರೀ ಕ್ಷೇತ್ರದಲ್ಲಿ ಜಾತ್ರೆ 15
ಸಂದೀಪಕ 17
ಕಾವ್ಯವಾಹಿನಿ 19
ಅಪಮೃತ್ಯು 20
ಶಕ್ತಿ-ಉಗಮ ಮತ್ತು ವಿಕಾಸ 22
ಸಿದ್ಧಗಂಗಾ ಪತ್ರಿಕೆಯ ಒಡೆತನ 25

ಮುಖ ಪುಟ

ಶಿವರಾತ್ರಿಯಲ್ಲಿ ಜಾತ್ರೆಯ ಅಂಗವಾಗಿ ಏರ್ಪಡಿಸಿದ್ದ ವ್ಯವಸಾಯ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದ ಉತ್ತಮ ಮಳಿಗೆಗಳಿಗೆ ಬೆಂಗಳೂರು ನಗರಾಡಳಿತ ಮಂಡಳಿಯ ಅಧ್ಯಕ್ಷ ಶ್ರೀ ಬಿ.ಟಿ. ಸೋಮಣ್ಣನವರು ಬಹುಮಾನ ನೀಡಿ ಮುಕ್ತಾಯ ಭಾಷಣ ಮಾಡಿದರು. ಉಭಯ ಶ್ರೀ ಶ್ರೀಗಳವರೂ ಉಪಸ್ಥಿತರಿದ್ದಾರೆ.

ಓದುಗರಲ್ಲಿ ಮನವಿ

'ಸಿದ್ಧಗಂಗಾ' ಲೇಖಕರಿಂದ ಧಾರ್ಮಿಕ, ಸಾಂಸ್ಕೃತಿಕ ಐತಿಹಾಸಿಕ ಹಾಗೂ ವೈಚಾರಿಕ ಲೇಖನಗಳು ಸಣ್ಣಕಥೆ, ಕವನ, ಪ್ರಬಂಧ ಇವುಗಳನ್ನು ಸದಾ ಸ್ವಾಗತಿಸುತ್ತದೆ. ಲೇಖನಗಳು ಫುಲ್‌ಸ್ಕೇಪ್ ಸೈಜಿನ 3 ಪುಟಗಳಿಗೆ ಮೀರದಂತಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ. ಸ್ವೀಕೃತ ಲೇಖನಗಳಿಗೆ 'ಸಿದ್ಧಗಂಗಾ' ಆಗ್ಗಿಂದಾಗ್ಗೆ ನಿನದಿಪಡಿಕೊಳ್ಳುವ ಸಂಭಾವನೆಯನ್ನು ನೀಡಲಾಗುವುದು. ಲೇಖನಗಳನ್ನು

"ಸಂಪಾದಕರು"
'ಸಿದ್ಧಗಂಗಾ' [ಕನ್ನಡ ಮಾಸ ಪತ್ರಿಕೆ]
ಶ್ರೀ ಸಿದ್ಧಗಂಗಾ ಕ್ಷೇತ್ರ –572131 ತುಮಕೂರು ಜಿಲ್ಲೆ

ಇವರಿಗೆ ಕಳಿಸಿ ಕೊಡಬೇಕಾಗಿ ಪ್ರಾರ್ಥನೆ.

ಚಂದಾದಾರರಲ್ಲಿ ಮನವಿ

ನಿಮ್ಮ ಚಂದಾ ಅವಧಿ ಮುಗಿಯುವವರೆಗೆ ವಿಳಾಸ ಬದಲಾವಣೆ ಮತ್ತು ಇತರೆ ಬಗ್ಗೆ ವ್ಯವಹರಿಸುವಾಗ ವಿಳಾಸದ ಹಿಂಬದಿ ಇರುವ ಕ್ರಮಾಂಕ ಅಥವಾ ಯಾರ ಮೂಲಕ ಸದಸ್ಯತ್ವ ಪಡೆದಿರುವಿರೋ ಆ ನಮ್ಮ ಪ್ರತಿನಿಧಿಗಳ ಹೆಸರನ್ನು ಸೂಚಿಸಿ ಪತ್ರ ಬರೆಯಿರಿ.

ಚಂದಾ ಅವಧಿ ಮುಗಿದಿರುವ ಮಾನ್ಯ ಓದುಗರು ನೂತನ ಸಾಲಿಗೆ ಮುಂದುವರಿಸಿಕೊಳ್ಳಬೇಕಾಗಿ ವಿನಂತಿ.

ಚಂದಾ ಬಾಕಿ ಇರುವವರು ಸಂದಾಯ ಮಾಡಿ 'ಸಿದ್ಧಗಂಗಾ' ಮುನ್ನಡೆಗೆ ಸಹಕರಿಸಿ.

ಪ್ರಕಾಶಕರು
'ಸಿದ್ಧಗಂಗಾ' ಮಾಸ ಪತ್ರಿಕೆ, ಸಿದ್ಧಗಂಗಾಮಠ–572131, ತುಮಕೂರು ಜಿಲ್ಲೆ

ನವನೀತ

(ಸಂಸ್ಕೃತ ಶ್ಲೋಕಗಳ ಭಾವಾನುವಾದ)

ಖಲಃ ಕರೋತಿ ದುರ್ವೃತ್ತಂ ನೂನಂ ಫಲತಿ ಸಾಧುಷು ।
ದಶಾನನೋಃ ಹರೇತ್ ಸೀತಾಂ ಬಂಧನಮ್ ಸ್ಯಾನ್ಮಹೋಪಧೇಃ॥

ದುರ್ಜನನು ಮಾಡುವನು ಕೆಡುಕನ್ನು ಜಗಕೆ
ಸಜ್ಜನನ ನರಳಾಟ ಪರಿಣಾಮವದಕೆ
ಸೀತೆಯನು ಕದ್ದೊಯ್ದ ರಾವಣನು ಮನೆಗೆ
ಸೇತು ಬಂಧನವಾದುದಾ ಸಾಗರನಿಗೆ

❀

ವರಂ ಪರ್ವತ ದುರ್ಗೇಷು ಭ್ರಾಂತ್ಯೈಃ ವನಚರೈಃ ಸಹ।
ನ ಮೂರ್ಖಜನ ಸಂಪರ್ಕಃ ಸುರೇಂದ್ರ ಭವನೇಷ್ವಪಿ॥

ಬೆಟ್ಟಗುಡ್ಡಗಳಲ್ಲಿ ಸುತ್ತಿ ಸುಳಿದು
ದುಷ್ಟಮೃಗಗಳ ಜೊತೆಯೊಳಲೆವುದೊಳಿತು.
ದೇವೇಂದ್ರಸರಮನೆಯೊಳಾದರೂ ಬೇಡ
ಮೂರ್ಖರೊಡನಾಟವಿದ ಮರೆಯಬೇಡ

❀

ಮೂರ್ಖೋಪಿ ಶೋಭತೇ ತಾವತ್ಸಭಾಯಾಂ ವಸ್ತ್ರವೇಷ್ಟಿತಃ।
ತಾವಚ್ಚ ಶೋಭತೇ ಮೂರ್ಖೋ ಯಾವತ್ಕಿಂಚಿನ್ನ ಭಾಷತೇ॥

ಪಂಡಿತರ ಸಭೆಯೊಳಗೆ ಮಂಡಿಸಿದ ಮೂರ್ಖ
ಶೋಭಿಪನು ತಾನುಟ್ಟ ಬಟ್ಟೆಯಿಂದ
ಶೋಭಿಸುವನವ ತಾನು ಮೌನದಿಂದಿರಲು
ಬಾಯ್ಬಿಟ್ಟರಾಗುವುದು ಬಣ್ಣ ಬಯಲು

—'ಕಾವ್ಯಸುಧಾಪ್ರಿಯ'

ಅಮೃತ ಬಿಂದು

ದೇಹಕ್ಕಿಂತ ಬೇರೆಯಾದದ್ದು ಜೀವ. ಇದು ಸ್ಥಿರ. ಇದನ್ನೇ ಆತ್ಮವೆಂತಲೂ ಭಾವಿಸುವುದುಂಟು. ಮೃತ ದೇಹದೊಡನೆ ಜೀವಿತ ದೇಹವನ್ನು ಹೋಲಿಸಿದರೆ ಆತ್ಮ ಎಂದರೇನು ಎಂಬುದು ತಿಳಿಯುತ್ತದೆ. ಜೀವ ನಶ್ವರವೆಂದು ಅನೇಕರು ವಾದಿಸುವುದುಂಟು. ಪೃಥ್ವಿ, ಅಪ್ಪು, ವಾಯು, ಆಕಾಶ, ತೇಜಸ್ಸು ಇವುಗಳಿಂದ ಶರೀರ ಆಗಿದೆ. ಪಂಚಭೂತಗಳು ನಷ್ಟವಾದ ಕೂಡಲೇ ಶರೀರದೊಡನೆ ಆತ್ಮವೂ ನಷ್ಟವಾಗುತ್ತದೆ. ಎಂಬುದು ಇಂತಹವರ ವಾದ. ಶರೀರ ಗೋಚರ; ಆತ್ಮ ಅಗೋಚರ. ಎಲೆ, ಅಡಕೆ, ಸುಣ್ಣ ಈ ಮೂರೂ ವಸ್ತುಗಳಲ್ಲಿಲ್ಲದ ಕೆಂಪು ಬಣ್ಣ ಇವುಗಳ ಸಂಗಮದಿಂದ ಉಂಟಾಗುವಂತೆಯೇ ಪಂಚಭೂತಗಳ ಸಂಗಮದಿಂದ ಶರೀರದಲ್ಲಿ ಅಗೋಚರ ಆತ್ಮದ ಆವಿರ್ಭಾವವಾಗುತ್ತದೆ. ಸ್ವಲ್ಪ ಕಾಲದವರೆಗೆ ಇದ್ದು ಆಮೇಲೆ ಇಲ್ಲದಂತಾಗುವ ಕೆಂಪು ಬಣ್ಣದಂತಯೇ ಆತ್ಮವೂ ದೇಹಾವಸಾನಾನಂತರ ಇಲ್ಲವಾಗುತ್ತದೆ ಎಂಬ ವಾದ ಒಪ್ಪತಕ್ಕದ್ದಲ್ಲ. ಏಕೆಂದರೆ ಆತ್ಮ ' ಅಜ ' ಅಂದರೆ ಹುಟ್ಟತಕ್ಕದ್ದಲ್ಲ. ಅಂದಮೇಲೆ ಅದಕ್ಕೆ 'ಸಾವು' ಎಲ್ಲಿಂದಬರಬೇಕು? ಆದ್ದರಿಂದ ಅದು 'ಅಮರ'. ಶರೀರವು ಹುಟ್ಟುತ್ತದೆ, ಸಾಯುತ್ತದೆ. ಆದರೆ ಆತ್ಮಕ್ಕೆ ಹುಟ್ಟುಸಾವುಗಳಿಲ್ಲ. ಬಾಲ್ಯ. ತಾರುಣ್ಯ. ಯೌವನ, ವಾರ್ಧಕ್ಯಗಳಂತೆ ಮರಣವೂ ಒಂದು ಅವಸ್ಥೆ. ಜೀರ್ಣವಾದ ಬಟ್ಟೆಯನ್ನು ಬಿಸಾಡಿ ಹೊಸ ಬಟ್ಟೆಯನ್ನು ಧರಿಸುವಂತೆ ಆತ್ಮವೂ ಸಹ ಜೀರ್ಣ ಶರೀರವನ್ನು ತೊರೆದು ಹೊಸ ಶರೀರವನ್ನು ಸೇರುತ್ತದೆ. ಶರೀರ ಬದಲಾವಣೆಯೇ ಹೊರತು ಅದು ಆತ್ಮ ನಾಶವಲ್ಲ.

—'ದುಂಬಿ'

ಸತ್ಯಶೋಧನೆ

—ರಂ. ಶ್ರೀ. ಮುಗಳಿ

> ಸತ್ಯ ಯಾವುದು ? ಸತ್ಯ ವೊಂದೇ. ಆದರೆ ಅದರ ಸಾಕ್ಷಾತ್ಕಾರ ಪಡೆದ ಒಬ್ಬೊಬ್ಬರೂ ಅದನ್ನು ಪರಿಪರಿಯಿಂದ ವರ್ಣಿಸುತ್ತಾರೆ. ಸತ್ಯದಾಚೆಗಿನ ಸತ್ಯ ಮನುಷ್ಯನ ಕೈಗೆಟುಕದೆ ಉಳಿದಿರುವುದು ನಿತ್ಯಸತ್ಯ.

ಸಮಾಜದ ನೈತಿಕ ಪಾತಳಿ ಹಲವಾರು ಕಾರಣಗಳಿಂದ ಕೆಳಮಟ್ಟಕ್ಕೆ ಇಳಿದ ಈ ಕಾಲದಲ್ಲಿ ಮೋಸ ಮಾಡುವ ಬೈರಾಗಿಗಳು, ಆಷಾಡಭೂತಿಗಳು ಹೆಚ್ಚುತ್ತಿರುವುದು ಕಂಡುಬರುತ್ತಿದೆ. ಇವರಿಗೆ ಮೋಸ ಹೋಗಬಾರದು, ಇವರ ಕುಹಕವನ್ನು ಬಯಲಿಗೆಳೆಯಬೇಕು. ನಿಜ. ಹೀಗೆಂದು ನಿಜವಾದ ಸಾಧುಸಂತರ ಮಹಿಮೆಯನ್ನು ಅಲ್ಲಗಳೆಯುವುದು ತರವಲ್ಲ ಕೆಲವು ಸುಶಿಕ್ಷಿತರು ಈವೊತ್ತು ನಾಗರೀಕ ವೇಷದಲ್ಲಿದ್ದು ಸವಿಸವಿಯಾದ ಮಾತುಗಳನ್ನಾಡಿ ಕುಕೃತ್ಯಗಳಲ್ಲಿ ತೊಡಗಿರುವರೆಂದು 'ಎಲ್ಲ ಸುಶಿಕ್ಷಿತರೂ ಹೀಗೇ' ಎಂದು ಹೀಗಳೆಯಬೇಕೇ ?

ಯಾರು ಒಳ್ಳೆಯವರು, ಯಾರು ಕೆಟ್ಟವರು, ಯಾವುದು ಸತ್ಯ, ಯಾವುದು ಸುಳ್ಳು ಎಂಬುದನ್ನು ಅರಿತುಕೊಳ್ಳಬೇಕೆಂಬ ಚಿಕಿತ್ಸಕ ಬುದ್ಧಿ ಒಳ್ಳೆಯದೇ. ಆದರೆ ಅದನ್ನು ಅರಿತುಕೊಳ್ಳುವುದು ನಾವು ತಿಳಿದಷ್ಟು ಸುಲಭವಲ್ಲ. ಇಂದಿನ ಗೋಜುಗೋಜಾದ ಸಭ್ಯತೆಯ ಪರಿಸರದಲ್ಲಿ ಒಳ್ಳೆಯವರು ಕೆಟ್ಟವರಾಗಿ ತೋರಬಹುದು, ಕೆಟ್ಟವರಂತೂ ತುಂಬ ಒಳ್ಳೆಯವರಾಗಿ ಕಾಣಬಹುದು. ಸತ್ಯ ಸುಳ್ಳಾಗಿ ತೋರೀತು. ಸುಳ್ಳು ಸತ್ಯವಾಗಿ ಮೆರೆದೀತು. ನಾವು ಅಳೆಯುವ ಮಾನದಂಡಗಳೆಲ್ಲ ಮೊಂಡು ಬಾಣಗಳಾಗಿ ಹುಸಿಹೋದಾವು. ಅಂತೇ ಈ ದಾರಿಯಲ್ಲಿ ತುಂಬ ಎಚ್ಚರಿಕೆಯಿಂದಲೂ ವಿವೇಚನೆಯಿಂದಲೂ ನಡೆದು ಸತ್ಯಶೋಧನೆಗೆ ತೊಡಗಬೇಕಾಗುತ್ತದೆ.

'ಯಾವುದು ಸತ್ಯ ?' ಎಂಬ ಪ್ರಶ್ನೆ ಸಾವಿರಾರು ವರ್ಷದಿಂದ ಮನುಷ್ಯನನ್ನು ಕಾಡಿದೆ. ಉತ್ತರಕ್ಕಾಗಿ ಇನ್ನೂ ಕಾದಿದೆ. 'ಸತ್ಯವೊಂದೇ, ಅದನ್ನು ಬಹು ಪರಿಯಿಂದ ಬಣ್ಣಿಸುತ್ತಾರೆ' ಎಂದು ವೇದಕಾಲದ ಋಷಿಗಳು ಹೇಳಿದರು. ಇದರಿಂದ, ಮೂಲತಃ ಸತ್ಯ ಒಂದೇ. ಅದನ್ನು ಬೇರೆಬೇರೆಯವರು ತಂತಮ್ಮ ತಿಳಿವಳಿಕೆಯ ಸ್ತರದಲ್ಲಿ ಬೇರೆಬೇರೆಯಾಗಿ ಕಾಣುತ್ತಾರೆ ಎಂದು ಹೇಳಬಹುದು. ಆಮೇಲೆ, ಉಪನಿಷತ್ಕಾರರು ಹೇಳಿದರು. 'ಈ ಪರಮ ಸತ್ಯ ಕೇವಲ ತರ್ಕದಿಂದ ತಿಳಿಯಲಾಗದು' ಎಂದು. 'ಇದು ತಿಳಿದಿದೆ ಎಂದವರಿಗೆ ತಿಳಿದಿಲ್ಲ, ತಿಳಿದಿಲ್ಲ ಎಂದವರಿಗೆ ತಿಳಿದಿರುತ್ತದೆ' ಎಂದು ಬೆಡಗಿನ ನುಡಿಯಲ್ಲಿ ಹೇಳಿದರು ಅನುಭಾವಿಗಳಲ್ಲಿ ಅಗ್ರಗಣ್ಯರಾದ ಅಲ್ಲಮಪ್ರಭುಗಳು ಒಡನುಡಿದರು 'ನಿರಾಳವೆಂಬ ಕೂಸಿಂಗೆ ಬೆಣ್ಣೆಯ ನಿಕ್ಕಿ ಹೆಸರಿಟ್ಟು ಕರೆದವರಾರೋ ? ಅಕಟಕಟ ಶಬ್ದದ ಲಜ್ಜೆಯ ನೋಡಾ ! ಗುಹೇಶ್ವರನನರಿಯದ ಅನುಭಾವಿಗಳೆಲ್ಲರ ತರಕಟಗಾಡಿತ್ತು.' ನಿರಾಳವನ್ನು ಬಣ್ಣಿಸಲಾಗದ ಶಬ್ದವು ನಾಚಿಕೊಂಡಿತಂತೆ.

ಗುರುತ್ವಾಕರ್ಷಣ ಶಕ್ತಿಯನ್ನು ಕಂಡು ಹಿಡಿದ ವಿಜ್ಞಾನಿ ಅತ್ಯಂತ ನಮ್ರತೆಯಿಂದ ಹೇಳಿದನು 'ಜ್ಞಾನವೆಂಬ ಅಪಾರ ಸಾಗರ ತೀರದಲ್ಲಿಯ ಮಳಲರಾಶಿಯ ಒಂದು ಕಣದಷ್ಟು ಮಾತ್ರ ನನಗೆ ದೊರೆತಿದೆ' ಇಂದಿನ ವಿಜ್ಞಾನಿ ಅಣುವಿನಲ್ಲಿ ಶಕ್ತಿಯನ್ನು ಕಂಡುಹಿಡಿದು ಅದನ್ನು ವಿಕಾಸಕ್ಕೆ ವಿನಾಶಕ್ಕೆ ಬಳಸಿ. ಬೆಕ್ಕಸ ಬೆರಗಾಗಿದ್ದಾನೆ, ಇನ್ನೂ ತನಗೆ ತಿಳಿಯದ ರಹಸ್ಯ ಏನಿರುವುದೋ ಎಂದು ದಿಙ್ಮೂಢನಾಗಿದ್ದಾನೆ

[26ನೇ ಪುಟ ನೋಡಿ]

ಶ್ರೀ ಶರಣ ಬಸವೇಶ್ವರರು

—ವಸಂತಕುಷ್ಟಗಿ

ಅರಳಲಿರುವ ಮೊಗ್ಗು ಪರಿಮಳ ಬೀರುವಂತೆ ಶರಣರ ಹಿರಿಮೆಯನ್ನು ಅವರ ಬಾಲ್ಯವೇ ಸೂಚಿಸುತ್ತದೆ.

ಕರ್ನಾಟಕ ಪ್ರಾಂತದಲ್ಲಿರುವ ಕಲಬುರಗಿ ಜಿಲ್ಲೆಯಲ್ಲಿ ಸಗರವೆಂಬುದೊಂದು ಇತಿಹಾಸ ಪ್ರಸಿದ್ಧವಾದ ಗ್ರಾಮ ವಿದೆ. ಆ ಗ್ರಾಮದ ಸುತ್ತು ಮುತ್ತಲಿನ ನಾಡಿಗೆಲ್ಲ "ಸಗರ ನಾಡು" ಎಂಬ ಹೆಸರು ರೂಢಿಯಲ್ಲಿದೆ. ಕೃಷ್ಣೆ ಭೀಮೆಯರ ಕೃಪೆಗೆ ಒಳಪಟ್ಟ ಈ ನಾಡು ನಿಜಕ್ಕೂ ಫಲವತ್ತಾದ ಪ್ರದೇಶ. ಸಮೃದ್ಧಿಯಿಂದ ತುಂಬಿ ತುಳು ಕುವ ಬೀಡು. ಇಂತಹ ನಾಡು ಸುಮಾರು ೨೦೦ ವರ್ಷ ಗಳ ಹಿಂದೆ ಸುರಪುರ ನಾಯಕರ ಆಳ್ವಿಕೆಗೆ ಒಳಪಟ್ಟಿತ್ತು. ಆ ಭಾಗದಲ್ಲಿಯೇ ಇರುವ ಅರಳಗುಂಡಿಗೆ ಎಂಬ ಗ್ರಾಮದಲ್ಲಿ ನಮ್ಮ ಕಾರಣಿಕ ಶಿಶು, ದಾಸೋಹದ ಮಹಾ ಕರುಣಿ ಶರಣ ಬಸವೇಶ್ವರರು ಜನ್ಮ ತಾಳಿದರು. ಆ ಗ್ರಾಮವು ಕಲಬುರಗಿಯಿಂದ ದಕ್ಷಿಣ ದಿಕ್ಕಿಗೆ ಸುಮಾರು ೩೦-೩೨ ಮೈಲುಗಳ ಅಂತರದಲ್ಲಿದ್ದು ಈಗ ಜೇವರಗಿ ತಾಲ್ಲೂಕಿಗೆ ಸಂಬಂಧಪಟ್ಟ ಹಳ್ಳಿಯಾಗಿದೆ.

ಶರಣ ಬಸವೇಶ್ವರರ ಜನನದ ನಂತರ ಅರಳ ಗುಂಡಿಗೆಗೆ ನಿಜವಾದ ಔಚಿತ್ಯವು ಬಂದಿತು. ಏಕೆಂದರೆ ಶರಣ ಬಸವೇಶ್ವರರು ಅಧ್ಯಾತ್ಮದ ಅರಳಾಗಿ ಅರಳಿದುದು ಈ ಗ್ರಾಮದಿಂದಲೇ ಅಲ್ಲವೇ? ಇಂಥ ಮಹಿಮೆಯನು ಮೆರೆಯಬೇಕಾಗಿದ್ದ ಪೆಂಪಿನ ಅಲಂಪಿನ ಈ ಊರಿನಲ್ಲಿ ಆದಯ್ಯ ಮಡಿಯಮ್ಮನವರೆಂಬ ನಿಷ್ಕಾಮಿಂತ ವೀರಶೈವ ದಂಪತಿಗಳು ವಾಸವಾಗಿದ್ದರು. ಅವರು [illegible]ವಂತರು. ಜೀವ ಜಂತುಗಳಲ್ಲಿಯೂ ಅನುಕಂಪ ಶೀಲರು. ನಿಷ್ಕಾಮ ಭಕ್ತರು. ದಾಸೋಹ ಪ್ರಿಯರು. ಇಷ್ಟೆಲ್ಲ ಸಾತ್ವಿಕತೆಯು ಅವರಲ್ಲಿ ತುಂಬಿ ತುಳುಕುತ್ತಿದ್ದರೂ ಅವರ ಪರೀಕ್ಷೆಗೋ ಎಂಬಂತೆ ಪರಮಾತ್ಮನು ಅವರಿಗೆ ಮಕ್ಕಳನ್ನು ಕೊಟ್ಟಿರ ಲಿಲ್ಲ. ಈ ಕೊರಗು ಕೇವಲ ಮಡಿಯಮ್ಮನವರಿಗೆ ಮಾತ್ರ ಮೀಸಲಾಗಿತ್ತು. ಏಕೆಂದರೆ ಆದಯ್ಯನವರಿಗೆ ದಾಸೋಹ ಒಂದನ್ನು ಬಿಟ್ಟರೆ ಮತ್ತೊಂದರ ಚಿಂತೆಯೇ ಇರಲಿಲ್ಲ. ಇದನ್ನು ಕಂಡು ಮಡಿಯಮ್ಮನವರು,

"...............
ಕಂದನಿಲ್ಲದ ಸಂಸೃತಿ ಕಾನನದ ವಸತಿ ಇಂದು
ಯಿಲ್ಲದ ನಿಶೆಯೊ ಮೇಣ್ ||
ಚಂದಳಿರ ಬಂಧಿಸಿದ ಹಂದರದ ಮನೆಯೊಲರ |
ವಿಂದ ಬಾಂಧವ ನಿಲ್ಲದಗಲಂತೆ ಕುಲನಾಶ |
ವಂಧೆಯರ ಜನ್ಮ ವ್ಯರ್ಥೆಂದು" ನುಡಿದರು.

ಈ ಮಾತುಗಳನ್ನು ಗಮನಿಸಿದಾಗ ನಿಜವಾಗಿಯೂ ಬಂಜೆಯರ ಬಾಳ್ವೆ ಬಾಳೆಲೆಯ ಹಾಸಿ ಉಂಡು ಬೀಸಿ ಎಸೆವಂತೆಯೇ ಸರಿ ಎನ್ನಿಸುತ್ತದೆ. ಆದರೆ ಆದಯ್ಯ ನವರು ಮಡದಿಯ ಮನದ ಕೊರಗಿಗೆ ಅಷ್ಟೊಂದು ಮಹತ್ವ ಕೊಡದೆ, ಬಹಳ ಹಗುರವಾಗಿ, "ಶಿವ ನೇನು ಕುರುಡನೆ? ಅವನಾಗಿ ಕೊಟ್ಟರೆ ನಾವು ಮಕ್ಕಳನ್ನು ಪಡೆಯುತ್ತೇವೆ. ನಿಷ್ಕಾಮಿಂತ ಭಕ್ತರಾದ ನಾವು ಭಕ್ತಿ ಯನ್ನು ಕೈಗೂಲಿ ಮಾಡಬಾರದು" ಎಂದು ಮಡದಿಯ ಸಮಾಧಾನಕ್ಕೆಂದು ಶಿವಪೂಜಾವ್ರತವನ್ನು ಬೋಧಿಸಿದರು. ಆ ವ್ರತ ಮಹಿಮೆಯಿಂದ ಶಂಕರನು ಅವರ ಕನಸಿನಲ್ಲಿ ಬಂದು,

"...............ಚರರೂಪದಿಂದೆ ನಿಂದು ||
ಮರುಗದಿರು ಮಗ ನಿನ್ನ ಕಿರಿತಮ್ಮನರಸಿ ಸುಂ |
ದರಗಾತ್ರೆ ಸಂಗಮ್ಮನುರದರದೊಳು ಜನಿಸಿ ಶಿವ|
ಶರಣರೊಳಧಿಕನಹ ವರನಾಮ ಶರಣಬಸವಪ್ಪ
ನೆಂದಿಡು ಮರೆಯದೇ ||
ಜನಿಸಿದಾಗಳೆ ನಿನಗೆ ತನುಜನಾದಪನವರು
ಮನಮುಟ್ಟಿ ನಿನಗೊಪ್ಪಿಸುವರೆಣಿಸರೆರಡೆಂದು"

ಅಭಯ ಕೊಟ್ಟಂತೆ ಶಾಲಿವಾಹನ ಶಕೆ ೧೬೬೮ (ಕ್ರಿ.ಶ. ೧೭೪೬) ಪೌಷ್ಯವದ್ಯ ಷಷ್ಠಿ, ಹೇಮಂತ ಋತು, ಉತ್ತರಾಯಣ, ಚಿತ್ರಾ ನಕ್ಷತ್ರದಲ್ಲಿ ಸೋಮವಾರ ಮಲಕಪ್ಪ ಮತ್ತು ಸಂಗಮ್ಮ ಈ ದಂಪತಿಗಳ ಉದರ ದಿಂದ ಕಾರಣಿಕ ಶಿಶು ಪ್ರಪಂಚಕ್ಕೆ ಬಂದು ಅಮರೇಶ್ವರನ ಭಕ್ತರಾದ ಆದಯ್ಯ-ಮಡಿಯಮ್ಮರ ಉಡಿಯಲ್ಲಿ ಕರುಣೆಯ ಶಿಶುವಾಗಿ ಬೆಳೆದು ಕರುಣಾಮಯನಾಗಿ, ಭಕ್ತಿವಲ್ಲರಿಯಾಗಿ ಅರಳಿ ಹುಟ್ಟನಳಿಸುವ ಕಲೆಯನ್ನು ಕಲಿಸಲೆಂದು ಅರಳಗುಂಡಿಗೆಯ ಆ ಗ್ರಾಮದಲ್ಲಿ ಘಮ ಘಮಿಸಿತು. ಆ ಮಗುವಿನ ಬರುವು, ನಲ್ಮೆಗಿರಿಣವಾಗಿ, "ಮಾನವರ ಎದೆಗುಂಡಿಗೆಗಳನು ಅರಳಿಸಿತು" ಆದರಿಂದ ಎಲ್ಲಿ ನೋಡಿದರಲ್ಲಿ ಸಮ್ಮೋದಗಳು ಉಕ್ಕೇರಿದುವು.

ಶರಣ ಬಸವೇಶ್ವರರು. ಕಾರಣಿಕ ಶಿಶುವಾದರೂ ತಮ್ಮ ತಂದೆ ತಾಯಿಗಳಿಗೆ ಬಾಲಲೀಲೆಗಳನ್ನು ತೋರಿ ಅವರಿಗೆ ತೃಪ್ತಿಯನ್ನು ಉಂಟುಮಾಡಿದರು. ಕಿಂಚಿತ್ ದೊಡ್ಡವರಾದ ಮೇಲೆ ಅವರನ್ನು ಅಕ್ಷರಾಭ್ಯಾಸಕ್ಕಾಗಿ ಅವರ ಹಿರಿಯರು ಶಾಲೆಗೆ ಕಳಿಸಿದರು. ಅಲ್ಲಿ ಅವರಿಗೆ ಮಹಾತಪಸ್ವಿಗಳೂ, ಜ್ಞಾನಿಗಳೂ ಆದ ಕಲಕೇರಿ ಹಿರೇ ಮಠದ ಮುಳಸಿದ್ಧರು ಅಕ್ಷರಗಳ ಅರುಣೋದಯವನ್ನೂ ದೈವಭಕ್ತಿಯ ಕರುಣೋದಯವನ್ನೂ ಕರುಣಿಸಿದರು. ಅಷ್ಟೆ ಅಲ್ಲ ಮುಂದೆ ಸಮಯ ಸಾಧಿಸಿ ಮಂಗಲೋದಯ ದಂದು ತ್ರಿಕರಣ ಶುದ್ಧರಾಗಿದ್ದ ತಮ್ಮ ಶಿಷ್ಯಂದಿರಿಗೆ ಶಿವದೀಕ್ಷೆಯನ್ನು ದಯಪಾಲಿಸಿದರು. ಅಂದಿನಿಂದ ಶರಣ ಬಸವೇಶ್ವರರು ಅಷ್ಟಾವರಣಗಳನ್ನೇ ಅಂಗವೆಂದು, ಪಂಚಾ ಚಾರಗಳನ್ನೇ ಪ್ರಾಣವೆಂದು ಷಟ್‌ಸ್ಥಲಗಳನ್ನೇ ಭಾವ ವೆಂದು ತಿಳಿದು ನಡೆದರು. ತತ್‌ಪರಿಣಾಮವಾಗಿ ಅವ ರಲ್ಲಿ ಸೇವಾಭಾವವು ಬಳೆಬಳೆದು ದಾಸೋಹದ ಹೆಮ್ಮರ ವಾಯಿತು.

ಪ್ರಪಂಚದಲ್ಲಿ ವ್ಯಕ್ತಿಯು ಎಷ್ಟೇ ಪಂಡಿತನೂ, ತ್ಯಾಗಿಯೂ ಆಗಿದ್ದರೂ ಅವನು ಸಂಸಾರಿಯಾಗದ ವಿನಾ ಪೂರ್ಣತ್ವದ ಘನತೆಯು ಅವನಿಗಿಲ್ಲ. ಅಂತೆಯೇ ಜನನ ಮರಣಗಳಂತೆ ಮದುವೆಯೂ ಮಹಾನವಮಿಯೇ ಸರಿ. ಮದುವೆಯೆಂದರೆ ಕೇವಲ ಮಿದುವಾದ ಹೆಣ್ಣಿನ ಕೈಗಳು ದೊರೆತು ಸುಖವಾಗುವುದಷ್ಟೇ ಅಲ್ಲ ಪುರುಷ ಶಕ್ತಿಯ ಸಾಕ್ಷಾತ್ಕಾರವು ಅವಳಿಂದ ಲಭ್ಯವಾಗುತ್ತದೆ. ಆದಕ್ಕಾಗಿ ಸಂಸಾರದಿಂದ ಸದ್ಗತಿ ಸಾಧನೆ. ಈ ವಿಚಾರವು ನಿಜ ವಾಗಿಯೂ ಅರ್ಥಪೂರ್ಣವಾಗಿದೆ. ಅಂತೆಯೇ ಸತಿಪತಿ ಗಳು ಒಂದಾಗದ ಭಕ್ತಿಯು ಭಕ್ತಿಯೇ ಅಲ್ಲ. ಎಂಬು ದನ್ನು ನಾವು ಒಪ್ಪಲೇಬೇಕು. ಈ ಹಿನ್ನೆಲೆಯಲ್ಲಿ ಗುರು ಗಳ ಆದೇಶದ ಪ್ರಕಾರ ಕಲಬುರಗಿಗೆ ಸಮೀಪದಲ್ಲಿರುವ ಮಾಶಾಳ ಗ್ರಾಮದ ಭಾವಿಮನಿ ಶಾಂತಲಿಂಗಪ್ಪನವರ ಮಗಳಾದ ಮಹಾದೇವಮ್ಮನನ್ನು ಮದುವೆಯಾಗಿ ಶರಣ ಬಸವೇಶ್ವರರು ಸಂಸಾರಿಯಾದರು. ಸಂಸಾರಿಯಾಗಿ ಅನು ಭಾವಿಗಳಾದರು.

ಶರಣರು ಹಿಡಿದ ಕೈ, ಶರಣ ಶಕ್ತಿಯೇ ಆಗಿತ್ತು. ಅಂತೆಯೇ ಶರಣರ ಸತಿ ಮಹಾದೇವಮ್ಮನವರೂ ತ್ರಿವಿಧ ದಾಸೋಹ ನಿಷ್ಠೆಯನ್ನು ತಿಳಿದವರಾಗಿ ಲಿಂಗಾಂಗ ಸಾಮರಸ್ಯದ ಸ್ಥಿತಿಯನ್ನು ಅರಿತು ಅರಳಾಗಿದ್ದರು. ಇಂತಹ ಸಾಧ್ವಿಯ ಸ್ನೇಹದಲ್ಲಿ ಶರಣರೂ ಶಕ್ತಿಯಾದ ರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಶರಣರ ಪ್ರತಿ ಯೊಂದು ಕೆಲಸದಲ್ಲಿ ನಿರ್ಮಲ ಮನಸ್ಸಿನಿಂದ ಕೈಚಾಚು ತ್ತಿದ್ದರು. ಒಟ್ಟಾರೆ ಅವರಿಗೆ ಅನುರೂಪ ಸತಿಯಾಗಿ, ಕರುಣೆಯ ನೆರಳಾಗಿ ಇಬ್ಬರೂ ಒಂದಾಗಿ ಈ ಲೋಕದ ಶಿವಶಕ್ತಿಯರಾಗಿ ಸೃಷ್ಟಿಯನ್ನು ಬೆಳಗಿದರು. ಅವರಿಗೆ ಇಂದಿಂಗೆ ನಾಳಿಂಗೆ ಎಂಬ ಚಿಂತೆಯೇ ಇರಲಿಲ್ಲ. ಎಲ್ಲವೂ ಶಿವಕರುಣೆಯ ಪ್ರಸಾದವೆಂಬುದು ಅವರ ಭಾವನೆ. ಆದಕ್ಕಾಗಿ ಯಾರು ಏನು ಕೇಳಿದರೂ ಇಲ್ಲವೆನ್ನದೆ ಮುಕ್ತ ಮನಸ್ಸಿನಿಂದ ಅವರು ಕೇಳಿದುದನ್ನು ಕೊಟ್ಟು ಬಿಡುತ್ತಿದ್ದರು. ಆದರೆ ಈ ಅಮರ ಔದಾರ್ಯವು ಲೌಕಿಕದ ಅಣ್ಣತಮ್ಮಂದಿರಿಗೆ ಸರಿಬರಲಿಲ್ಲ. ಲೌಕಿಕದ ಕಣ್ಣಿಗೆ ಅಲೌಕಿಕವು ಹುಚ್ಚಿನ ಅವತಾರವೇ ಸರಿ. ಲೌಕಿಕದ ಭ್ರಮೆಯು ಅಳಿದುಹೋದ ಮೇಲೆಯೇ ಅಲೌಕಿಕದ ಅರಳಿನ ಸುವಾಸನೆಯು ಗಮ್ಯ. ಅಂತೆಯೇ ಅಲೌಕಿಕ

ರಾದ ಶರಣ ಬಸವೇಶ್ವರರ ನಡೆಯನ್ನು ವಿಚಿತ್ರವಾಗಿ ಕಂಡು ಅವರ ಸಹೋದರರು ಭಾಗಾದಿಗಳಾದುದು ಸೋಜಿಗದ ಸಂಗತಿಯೇನಲ್ಲ. ಈ ಹಿನ್ನೆಲೆಯಲ್ಲಿ ಅವರ ಆಸ್ತಿ ಹರಿದು ಹಂಚಿ ಹೋಯಿತು. ಹೀಗಾಗಿ ಇವರ ಪಾಲಿಗೆ ಒಂದು ಹಾಳು ಮನೆ ಮತ್ತು ಒಂದು ಕರಿಕೆಯ ಹೊಲ ಬಂದುವು.

ಪಾಲಿಗೆ ಬಂದುದು ಪಂಚಾಮೃತವೆಂದು ಶರಣ ಬಸವೇಶ್ವರರು ಒಕ್ಕಲತನದ ಕಾಯಕವನ್ನು ಆರಂಭಿಸಿದರು. ಹೊಲ ಬೆಳೆಯಿಂದ ತುಂಬಿನಿಂತಾಗ ಪಶುಪಕ್ಷಿಗಳು ಬೆಳಸಿಗೆ, ಮೇವಿಗೆ ಆಶಿಸಿ ಬರುತ್ತಿದ್ದವು. ದಯೆಯೇ ಧರ್ಮದ ಮೂಲವೆಂದು ಬಗೆದ ಈ ಶರಣರು ಆ ಮೂಕ ಪಶುಪಕ್ಷಿಗಳಿಗೆ ನೀರಿನ ಕೊರತೆಯಾಗಬಾರದೆಂದು ನಾಲ್ಕು ರಂಜಣಿಗೆಗಳನ್ನಿಟ್ಟು ಸತಿಪತಿಗಳಿಬ್ಬರೂ ನೀರು ತುಂಬುತ್ತಿದ್ದರು. ಇಂತಹ ದಯಾ ಸಮುದ್ರರು ಇನ್ನು, ಮಂಚಿಕೆ ಹಾಕಿ ಪಶುಪಕ್ಷಿಗಳನ್ನು ಓಡಿಸುತ್ತಾರೆಯೆ? ಅದರಂತೆ ಇಂತಹ ನಿಸ್ವಾರ್ಥ ಭಕ್ತರ ಬಗ್ಗೆ ಈಶ್ವರನೂ ಕೂಡ ಕುರುಡನಾಗುವುದಿಲ್ಲ. ಯಾವುದೋ ಒಂದು ರೀತಿಯಲ್ಲಿ ಚಮತ್ಕಾರವಾಗಿ ಪವಾಡ ರೂಪದಲ್ಲಿ ಅನುಗ್ರಹವನ್ನು ದಯಪಾಲಿಸುತ್ತಾನೆ. ಆ ಅನುಗ್ರಹವು ಕಣ್ಣಿದ್ದವರಿಗೆ ಕಾಣುವ ವಸ್ತು. ಹೀಗಾಗಿ ಶರಣರ ಹೊಲದಲ್ಲಿ ಮಣ್ಣಿನ ಕಣ್ಣಿನವರಿಗೆ ಕೇವಲ ಹಕ್ಕಿ ಕುಕ್ಕಿ ಬಿಟ್ಟ ಕಂಕಿಗಳೇ ಕಾಣತೊಡಗಿದವು. ಆದರೆ ರಾಶಿ ಮಾಡಿದಾಗ ಎಣಿಕೆಗೆ ನಿಲುಕದಷ್ಟು ಬೆರಗುಗೊಳಿಸುವ ರಾಶಿ ರಾಶಿ ಕಾಳು. ಈ ರೀತಿ ಹೇರಳವಾದ ರಾಶಿ ಬಂದರೂ ನಿಚ್ಚದಾಸೋಹಿಗಳಾದ ಆ ದಂಪತಿಗಳಿಗೆ ಬಿಂಕ ಬರಲಿಲ್ಲ. ಒಕ್ಕು ಮಿಕ್ಕುದನ್ನುಂಡು ಸರ್ವಾರ್ಪಣ ಬುದ್ಧಿಯನ್ನು ಬೆಳಸಿಕೊಂಡರು. ಅಂತೆಯೇ ಕಾಡದೆ ಅವರಿಗೆ ಪರಮಾತ್ಮನು "ಗುರು ಲಿಂಗ ಜಂಗಮ"ನೆಂಬ ಮಗನನ್ನು ಕರುಣಿಸಿದನು.

ಶರಣ ಬಸವೇಶ್ವರರು ಮೃದುತ್ವದ ಮೇರು ಪರ್ವತವೇ ಆಗಿದ್ದರು. ಏಕೆಂದರೆ ಶಿವಪೂಜೆಗಾಗಿ ಬಿಲ್ವಪತ್ರ ತರಲು ವನಕ್ಕೆ ಹೋದರೆ ಗಿಡದಲ್ಲಿ ಎಲೆಗಳನ್ನು ಬಿಡಿಸುತ್ತಿರಲಿಲ್ಲ. ಕೆಳಗೆ ತಾವಾಗಿಯೇ ಉದುರಿಬಿದ್ದ ಎಲೆಗಳನ್ನಷ್ಟೇ ಪೂಜೆಗೆ ತರುತ್ತಿದ್ದರು. ಹೀಗೆ ಮಾಡಲು, ಗಿಡ ಮರಸಸ್ಯಗಳಿಗೂ ಜೀವವಿದೆಯೆಂಬ ಜ್ಞಾನವು ಈ ಶರಣರಿಗೆ ಇದ್ದುದೇ ಕಾರಣವಾಗಿರಬೇಕು. ಇದು ಎಂತಹ ಸೌಜನ್ಯ. ಎಂತಹ ಮೃದು ಸ್ವಭಾವ. ವಿಜ್ಞಾನದಿಂದ ತುಂಬಿದ ಮನೋಭಾವ! ಇಂತಹವರು ತಮ್ಮ ಸದಾಚಾರದ ಬಲದಿಂದ ಮಾನವರ ಮನಸ್ಸಿನ ಕಾಠಿಣ್ಯವನ್ನು ಮೃದುಗೊಳಿಸಲಾರರೇನು? ಹೀಗೆ ಅವರು ಕಠಿಣ ಹೃದಯದವರನ್ನೂ ನಯದ ಔನ್ನತ್ಯಕ್ಕೇರಿಸಿದ ನಿದರ್ಶನಗಳು ಬಹಳ ಇವೆ. ಇವರ ದಾನ ಗುಣವನ್ನು ಕೇಳಿ ಕಂಡ ಕೆಲವು ಕಳ್ಳರು ಇವರೊಬ್ಬ ಶ್ರೀಮಂತರೆಂದೇ ಭಾವಿಸಿದರು. ಇವರ ಹತ್ತಿರ ಗುಪ್ತ ನಿಧಿಯು ಇರಲೇಬೇಕೆಂದು ಅವರು ಕಲ್ಪಿಸಿದರು. ಅಂತೆಯೇ ಹೂವುಗಳನ್ನು ಸಂಗ್ರಹಿಸಿ ಪೂಜೆಗೆಂದು ಸಿದ್ಧಗೊಳಿಸುತ್ತಿರುವ ತೋಟಕ್ಕೇನೆ ಆ ಕಳ್ಳರು ಬಂದು ಮುತ್ತಿದರು. ಗುಪ್ತ ಧನವೆಲ್ಲಿ ಎಂದು ಕೇಳಿ ಪೀಡಿಸಿದರು. ಅದಕ್ಕೆ ಶರಣರು ಇಂದೇ ಆ ಧನ ದೊರೆಯುತ್ತದೆಯೆಂದು ಯಾವ ಮುಂದಾಲೋಚನೆಯೂ ಇಲ್ಲದೆ ಹೇಳಿದರು. ಶರಣರ ಮಾತು ಸುಳ್ಳಾದೀತೆ? ಶರಣರು ನೀಡುವ ಧನವನ್ನು ಹೂತು ಇಡಲು ಒಂದು ತೆಗ್ಗನ್ನು ಆ ಕಳ್ಳರು ತೋಡತೊಡಗಿದರು. ಆಗ ನಿಜವಾಗಿಯೂ ಗುಪ್ತ ನಿಧಿಯು ಆ ಕಳ್ಳರಿಗೆ ದೊರೆಯಿತು. ಇದು ಶರಣರ ಮಹಿಮೆಯೆಂದು ಕಲ್ಪಿಸಿಕೊಂಡು ಶರಣರಿಗೆ ಶರಣಾಗಿ ತಮ್ಮ ತಪ್ಪನ್ನು ತಿದ್ದಿ ಉದ್ಧಾರ ಮಾಡಬೇಕೆಂದು ಕೇಳಿಕೊಂಡರು. ಹೀಗೆ ಸಜ್ಜನರ ಸಹವಾಸದಲ್ಲಿ ಹೆಜ್ಜೇನು ದೊರೆಯುತ್ತದೆ. ಮಹಾವಿಭೂತಿಗಳ ಸಂಪರ್ಕದಲ್ಲಿ ಬೋಕೆಯೂ ವಜ್ರವಾಗುತ್ತದೆಂಬುದನ್ನು ಈ ಘಟನೆಯು ಮನದಟ್ಟುಗೊಳಿಸುತ್ತದೆ.

ದಯಾಮಯರಾಗಿರುವಂತೆ ಶರಣಬಸವೇಶ್ವರರು ಸಮಾಜ ಸುಧಾರಕರೂ, ಪತಿತ ಪಾವನರೂ ಆಗಿದ್ದರು. ಅಂತೆಯೇ ಸಲ್ಲದ ರೀತಿಯಲ್ಲಿ ಹುಟ್ಟಿದ್ದ ಮಡಿವಾಳಪ್ಪನನ್ನು ಜಿವನೂರಿನ ಮಲ್ಲಿಕಾರ್ಜುನಪ್ಪ ಗೌಡನು ತಂದು ಶರಣರ ಪಾದಗಳಿಗೆ ಹಾಕಿದಾಗ, ಬಿದ್ದವನನ್ನು ಮೇಲಕ್ಕೆತ್ತಿ ಉದ್ಧಾರ ಮಾಡಿದರು. ಶಿವನು ದೋಷಯುಕ್ತನಾಗಿದ್ದರೂ ಆತನನ್ನು ತಾನು ಧರಿಸಿ ಅವನನ್ನು ಉದ್ಧಾರ ಮಾಡಿದಂತೆ ಮಡಿವಾಳಪ್ಪನನ್ನು ತಮ್ಮ ಶಿಷ್ಯನೆಂದು ಸ್ವೀಕರಿಸಿ ತಮ್ಮ ಗುರು ಮರುಳಸಿದ್ಧರಿಂದ ಶಿವದೀಕ್ಷೆಯನ್ನು ಕೊಡಿಸಿ ಆತನನ್ನು ಸಮಾಜ ಪೂಜ್ಯ

ನನ್ನಾಗಿ ಮಾಡಿದರು. ಅಂಥ ಸಮಾಜದ ಅಜ್ಞಾನಿಗಳು ಇವನ್ನು ವಿರೋಧಿಸಿದರು. ಇವರಿಗೆಲ್ಲ ಬಹಿಷ್ಕಾರವನ್ನು ಹಾಕುವಷ್ಟು ದೂರ ಹೋದರು ಇದರಿಂದ ಶರಣ ಬಸವೇಶ್ವರರಾಗಲೀ ಮಡಿವಾಳಪ್ಪನಾಗಲೀ ಅಳುಕಲಿಲ್ಲ. ಪರ್ಯಾಯವಾಗಿ ಮಡಿವಾಳಪ್ಪನು ಆತ್ಮತೇಜಸ್ಸನ್ನು ಪಡೆದು ಅಪರೋಕ್ಷಜ್ಞಾನಿಯಾಗಿ ಅನುಭಾವದಿಂದ ತುಂಬಿತುಳುಕುವ ಪದ ಪದ್ಯಗಳನ್ನು ಜಾನಪದ ಧಾಟಿಯಲ್ಲಿ ಬರೆದು ಶಾಶ್ವತವಾಗಿ ಕನ್ನಡ ಸಾಹಿತ್ಯದಲ್ಲಿ ಉಳಿದನು. ಮಾದರಿಗಾಗಿ ಆತನ ಒಂದು ಪದ್ಯವನ್ನು ನೋಡಬಹುದು.

"ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೋ ।
ತನ್ನಂತೆ ಸರ್ವರ ಜೀವ ಮನ್ನಿಸಿ ಮುಕ್ತನಾದ
ಮೇಲೆ ಇನ್ನೇನಿನ್ನೇನೋ ॥ಪ॥
ತಾನೆ ಪೃಥ್ವಿ ಅಪ್ಪು ತೇಜ, ತಾನೆ ವಾಯು
ಆಕಾಶಾತ್ಮಾ, ತಾನೆ ಸೂರ್ಯ ಚಂದ್ರ ತಾರೆ,
ತಾನೇ ಬ್ರಹ್ಮಾಂಡದ ಮೇಲೆ ಇನ್ನೇನಿನ್ನೇನೋ
ತಾನೆ ಪ್ರಾಣ ಜಿಹ್ವೆ ನೇತ್ರ, ತಾನೇ ತ್ವಕ್ಕು
ಶ್ರೋತ್ರ ಹೃದಯ, ತಾನೆ ಕಾಯಕರಣ ಹರಣ,
ತಾನೆ ಪಿಂಡಾಂಡದ ಮೇಲೆ ಇನ್ನೇನಿನ್ನೇನೋ
ತಾನೆ ಹೆತ್ತ ಸತ್ತ ಅತ್ತ, ತಾನೆ ನಿತ್ಯಸ್ತುತ್ಯ ಸತ್ಯ,
ತಾನೇ ಆರ್ತ ಚಿರ್ತ ಮರ್ತ ತಾನೇ ಸರ್ವನಾದ
ಮೇಲೆ ಇನ್ನೇನಿನ್ನೇನಿನ್ನೇನೋ
ತಾನೆ ಲಕ್ಷ ಸಾವಿರ ನೂರು, ತಾನೆ ಹತ್ತೊಂಭತ್ತೆಂಟು ಏಳು, ತಾನೆ ಆರೈದು ನಾಲ್ಕು ಮೂರು
ತಾನೇ ಎರಡೊಂದಾದ ಮೇಲೆ ಇನ್ನೇನಿನ್ನೇನೋ
ತಾನೇ ನೀನು, ನೀನೆ ತಾನು, ತಾನೇ ಅಲ್ಲ,
ತಾನೇ ಇಲ್ಲ, ತಾನೇ ಮಹಂತ, ತಾನೇ ತಾನು,
ಏನೋ ಏನೊಂದಾದ ಮೇಲೆ ಇನ್ನೇನಿನ್ನೇನೋ

ಹೀಗೆ ಆಧ್ಯಾತ್ಮದ ತಿರುಳನ್ನೇ ಸುಲಭವಾಗಿ ತಿಳಿಸಬಲ್ಲ ಇಂತಹ ಅನೇಕ ಪದಗಳನ್ನು ರಚನೆಮಾಡಿದುದಲ್ಲದೆ "ಶ್ರೀ ಮಹಾಂತ ನಿಜಲೀಲಾನುಭವ" ಎಂಬ ವಚನ ಗ್ರಂಥವನ್ನು ಬರೆದಿದ್ದಾನೆ. ಈತನ ಅಂಕಿತವು ಶಿವಶಿವ ಸಿರಾಳಿ ಮಪ್ರಭು ಮಹಾಂತಯೋಗಿ" ಎಂಬುದು.

ಈ ಮೇಲಿನ ಸಂದರ್ಭವನ್ನು ನೋಡಿದರೆ ಶ್ರೀ ರಾಮಕೃಷ್ಣ ಪರಮಹಂಸರಿಗೆ ವಿವೇಕಾನಂದರು ದೊರೆತಂತೆ ಶರಣಬಸವೇಶ್ವರರಿಗೆ ಮಡಿವಾಳಪ್ಪನವರು ದೊರೆತರೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಶ ರ ಣ ರ ಇನ್ನೊಂದು ಸೋಜಿಗದ ಸಂಗತಿಯೆಂದರೆ ಇವರು ವಚನಗಳನ್ನು ಬರೆಯದೇ ಇರುವದು ಅಥವಾ ಬರೆದಿದ್ದರೂ ಇನ್ನೂ ಅವು ಉಪಲಬ್ಧವಾಗದೇ ಇರುವುದು. ಆದರೆ ಇವರ ಸಾದಾ ಜೀವನ ಪರೋಪಕಾರಿ ಭಾವನೆಗಳ ಪ್ರತೀಕದ ಪ್ರಭಾವವೇ ಮಡಿವಾಳಪ್ಪನ ಅನುಭಾವ ಸಾಹಿತ್ಯ. ಇಂತಹ ಸಾಹಿತ್ಯ ನಿರ್ಮಾಣಕ್ಕೆ ಶರಣರು ಪ್ರೇರಕ ಶಕ್ತಿಯಾಗಿದ್ದರೆಂಬುದನ್ನು ಮರೆಯಬಾರದು.

ಶರಣರ ದಾಸೋಹ ಮಹಿಮೆಯು ಸುತ್ತು ನಾಲ್ಕೂ ಕಡೆಗೂ ಮುಟ್ಟಿ ಅನೇಕ ಜನ ಮೋಕ್ಷಾಕಾಂಕ್ಷಿಗಳೂ, ಸದ್ಧರ್ಮಶೀಲವಂತರೂ ಶರಣರ ಬಳಿಗೆ ಗುಂಪು ಗುಂಪುಗಳಲ್ಲಿ ಬರತೊಡಗಿದರು. ಇದರಿಂದಾಗಿ ಶರಣರಿಗೆ ಸಾಲ ಮಾಡುವ ಪ್ರಸಂಗವೂ ಬಂದಿತು. ಇಂತಹ ಪ್ರಸಂಗಗಳು ಸಾಧಕ ಜೀವಿಗಳ ವ್ಯಕ್ತಿತ್ವವನ್ನು ಮಿಂಚಿಸುವ ಒರೆಗಲ್ಲುಗಳು. ಅಂತಹ ಒಂದು ಸಂದರ್ಭದಲ್ಲಿ ಶರಣರು ಮೋರಟಗಿ ಗಿರಿಲಿಂಗಪ್ಪನ ಹತ್ತಿರ "ಶಿವನಿತ್ತಾಗ ಸಾಲ ತೀರಿಸುವೆನು" ಎಂದು ಹೇಳಿ ಒಂದು ಸಾವಿರ ರೂಪಾಯಿ ಸಾಲ ತಂದರು. ಕೆಲಕಾಲಗಳ ನಂತರ ಆ ಸಾಹುಕಾರನು ರಾಮಜೀದಾದಾ ಎಂಬ ಸೇವಕನನ್ನು ಸಾಲದ ವಸೂಲಿಗಾಗಿ ಕಳಿಸಿದನು. ಆ ಸೇವಕನು ಶರಣರ ಮನೆಯ ಮುಂದೆ ಧರಣಿಯನ್ನೇ ಹಾಕಿದನು. ಆತನಿನ್ನೂ ಧರಣಿಯಲ್ಲಿಯೇ ಇರುವಾಗ ಶಿವಮಹಿಮೆಯ ಬಲದಿಂದ ಸಾಲ ಬಡ್ಡಿ ಎಲ್ಲವೂ ಸಂದಾಯವಾಗಿ ಹೋಗಿತ್ತು. ಇದು ಶರಣರಿಗೂ ಸಾಹುಕಾರನಿಗೂ ಸೋಜಿಗವನ್ನುಂಟು ಮಾಡಿತು. ರಾಮಜಿಯಂತೂ ಪೂರ್ಣ ಪರಿವರ್ತನೆ ಹೊಂದಿದನು. ಶರಣರ ಆತ್ಮೀಯ ಶಿಷ್ಯರಲ್ಲೊಬ್ಬನಾಗಿ ಶ್ರೇಷ್ಠ ಸಾಧಕನಾದನು. ಹೀಗೆ ಶರಣರ ಭಕ್ತರ ಮೇಳದಲ್ಲಿ ಎಲ್ಲ ಜಾತಿಯವರಿಗೂ ಸಮಾನ ಮನ್ನಣೆಯು ದೊರೆಯುತ್ತಿತ್ತು. ಆದರೆ ಶರಣರು ಅಪ್ಪಟ ಆಪರಂಜಿಯಾಗಿದ್ದರೆ ಮಾತ್ರ ಅಂತಹವರನ್ನು ತಮ್ಮ ಶಿಷ್ಯರ ಬಳಗಕ್ಕೆ ಸೇರಿಸಿಕೊಳ್ಳುತ್ತಿದ್ದರು. ಒಟ್ಟಾರೆ ಶರಣರ ದಿವ್ಯದೃಷ್ಟಿಯಲ್ಲಿ ಮಾನವ ಕುಲ ಒಂದೇ ಆಗಿತ್ತು.

(ಮುಂದುವರಿಯುವುದು)

"ಶ್ರೀ ಅರವಿಂದರ ಆಧ್ಯಾತ್ಮಿಕ ಜೀವನ-ಮಹಾಮಾತೆಯವರ ಪಾತ್ರ"

ಎನ್ಕೆ

(ಹಿಂದಿನ ಸಂಚಿಕೆಯಿಂದ)

"ಪ್ರಭುವೆ ನನ್ನ ಪ್ರಾರ್ಥನೆಯನ್ನು ಆಲಿಸು, ನನ್ನ ಶತ್ರುಗಳನ್ನೆಲ್ಲ ಮಿತ್ರರನ್ನಾಗಿ ಪರಿವರ್ತಿಸು ಅಂಧಂತ-ಮನಸ್ಸನ್ನು ಅಧಿಕ ಪ್ರಕಾಶವನ್ನಾಗಿ ಪರಿವರ್ತಿಸು."

"ಆ ಕ್ಷಣಕ್ಕೆ ಪ್ರಜ್ಞೆಯು, ವ್ಯಕ್ತಿಗತ ಸತ್ತೆಯು ಮಾನಸಿಕ, ಪ್ರಾಣಿಕ ಹಾಗೂ ದೈಹಿಕ ಸ್ತರಗಳಲ್ಲಿ ರಜೋಮಯವಾಗಿದ್ದುದು ಕಂಡಿತು. ಈ ಸತ್ತೆಯು ನಿನಗೆ ಉದ್ದಂಡವಾಗಿ ನಮಸ್ಕರಿಸಿತು. ಅವರ ಹಣೆಯು ಭೂಮಿಯನ್ನು ಸ್ಪರ್ಶಿಸಿತು. ರಜವು ರಜವನ್ನು ಸ್ಪರ್ಶಿಸಿತು. ಆಗ ಅದು ಕೂಗಿಕೊಂಡಿತು. 'ಓ ಪ್ರಭುವೆ, ರಜೋಮಯವಾದ ಈ ಸತ್ತೆಯು ನಿನ್ನ ಮುಂದೆ ಉದ್ದಂಡವಾಗಿ ಮಣಿಯುತ್ತಿದೆ. ಸತ್ಯದ ಬೆಂಕಿಯಲ್ಲಿ ದಗ್ಧವಾಗಬಯಸುತ್ತದೆ. ಇದರಿಂದ ಅದರ ಅಂತರಂಗದಲ್ಲಿ ನೀನೇ ನೀನಾಗಿ ಕಾಣಿಸಿಕೊಳ್ಳಬೇಕೆಂದು ಬಯಸುತ್ತದೆ.' ಆಮೇಲೆ ನೀನು ನುಡಿದೆ, 'ಎದ್ದೇಳು, ನೀನು ಸಕಲ ರಜೋಮಯತೆಯಿಂದ ಪರಿಶುದ್ಧವಾಗಿದ್ದೀ.' ಒಮ್ಮಿಂದೊಮ್ಮೆಲೆ ಒಂದೇ ಪೆಟ್ಟಿನಿಂದ ಎಲ್ಲ ರಜವೂ ದೇಹದ ಮೇಲಿನ ಬಟ್ಟೆಯಂತೆ ಭೂಮಿಗೆ ಕಳಚಿಬಿತ್ತು. ಆಗ ಸತ್ತೆಯು ನೆಟ್ಟಗಾಗಿ ವಸ್ತ್ರ ನಿಸ್ತ್ರವಾಗಿ ಅದರ ಕಣ್ಣು ಕುಕ್ಕಿಸುವ ಬೆಳಕಿನಿಂದ ಹೊಳೆ ಹೊಳೆಯುತ್ತಿರುವಂತೆ ಕಂಗೊಳಿಸಿತು.

"ದುಃಖಿತವಾದ ಈ ಜಗತ್ತು ನಿನ್ನೆದುರಿಗೆ ಮೂಕ ಯಾಚನೆಯಲ್ಲಿ ಮೊಣಕಾಲೂರಿ ಮಣಿಯುತ್ತಿದೆ. ಈ ತ್ರಸ್ತ ಪೃಥ್ವಿಯು ನಿನ್ನ ಪಾದಪೀಡೆಗೆ ನ[illegible]ಡುತ್ತದೆ. ನಿನ್ನ ಪಾದ ಪದ್ಮಗಳೇ ಅದರ ಸಕಲ [illegible] ಆಮದ

ಮಹಾ ವಿಜಯಗಳು ಸದ್ದುಗದ್ದಲವಿಲ್ಲದೆ ಸಾಧಿತವಾಗುತ್ತವೆ. ಹೊಸಜಗತ್ತಿನ ಅವತಾರವು ಡಂಗುರದಿಂದ ಘೋಷಿತವಾಗುವುದಿಲ್ಲ

ರಿಂದ ನಿನ್ನಲ್ಲಿ ಮೊರೆಯಿಟ್ಟು ನಿನಗೆ ಸೆರಗೊಡ್ಡಿ ನೀನು ಯಾರೆಂಬುದು ತಿಳಿಯದಿದ್ದರೂ ಅದು ಬೇಡಿಕೊಳ್ಳುತ್ತದೆ.

"ಪ್ರಭುವೆ, ನನ್ನಲ್ಲಿ ಯೋಗಸಾಧನೆಯೂ ಇಲ್ಲ ಸದ್ಗುಣವೂ ಇಲ್ಲ ಎಂದು ಹೇಳುವದು ಸರಿಯಾದ ಮಾತು. ನನ್ನ ಜೀವನವು ನೋಡಲು ತೀರ ಸಾಮಾನ್ಯವಾದುದು, ತೀರ ಸಾಧಾರಣವಾದುದು. ಆಂತರಿಕವಾಗಿ ಅದೇನಿದೆ ?....ನಾನು ಏನನ್ನೂ ಆಶಿಸುವುದಿಲ್ಲ, ಏನನ್ನೂ ಅಪೇಕ್ಷಿಸುವದಿಲ್ಲ, ಏನನ್ನೂ ಇಚ್ಛಿಸುವುದಿಲ್ಲ. ಯಾತಕ್ಕಾಗಿಯೂ ಅಭೀಪ್ಸೆ ಪಡುವದಿಲ್ಲ. ಒಟ್ಟೇನು ? ನಾನು ಏನೂ ಅಲ್ಲ. ಆದರೂ ಆ ಒಂದು ಸುಖವು, ಶಾಂತವಾದ ಮಿಶ್ರಣವಲ್ಲದ ಸುಖವು, ತನ್ನನ್ನೇ ತಾನರಿಯದಂತಹ ಸುಖವು, ತನ್ನ ಅಸ್ತಿತ್ವವನ್ನು ನೋಡಬೇಕಾದ ಸುಖವು ಈ ದೇಹವೆಂಬ ಮಂದಿರದಲ್ಲಿ ವಾಸವಾಗಲು ಬಂದಿದೆ. ಈ ಸುಖವೆಂದರೆ ನೀನೇ. ಓ ದೊರೆಯೇ ಈ ಶಾಂತಿಯೆಂದರೂ ನೀನೇ."

ಮಾತೆಯವರು ಮಾನವತೆಗಾಗಿ ಆಜೀವ ಕಷ್ಟಪಟ್ಟರು. ಮಾನವತೆಯ ಉದ್ಧಾರಕ್ಕಾಗಿ ತಾವು ಜಡತ್ವದ ಮಧ್ಯದಲ್ಲಿ ಇಳಿದು ನಿಂತರು. ಅವರು ಹೇಳುತ್ತಾರೆ; "ನನ್ನ ದೊರೆಯೇ, ನನ್ನ ಮಧುರ ಪ್ರಭುವೆ, ನಿನ್ನ ಕಾರ್ಯ ಸಾಧನೆಗಾಗಿ ನಾನು ಜಡತೆಯ ಆಳಕ್ಕೆ ಇಳಿದು ಹೋಗಿದ್ದೇನೆ. ನನ್ನ ಬೆರಳಿನಿಂದ ಅಜ್ಞಾನದ ಮಿಥ್ಯೆಯ

ಅಸಹ್ಯತೆಯನ್ನು ನನ್ನ ಬೆರಳಿನಿಂದ ಮುಟ್ಟಿದ್ದೇನೆ. ಅಜ್ಞಾತದ ತಳವನ್ನು ತಟ್ಟಿದ್ದೇನೆ." ಮಾನವತೆಯ ಗುಲಾಮಳಾಗಿ ಮಾತೆಯವರು ಸೇವೆ ಸಲ್ಲಿಸಿದ್ದಾರೆ. ಈ ಸೇವೆಯಿಂದ ಅವರು ಯಾವ ಪ್ರತಿಫಲವನ್ನೂ ಅಪೇಕ್ಷಿಸಿಲ್ಲ ಕಷ್ಟಪಡುವವರೊಡನೆ ಕಣ್ಣೀರು ಹಾಕಿದ್ದಾರೆ. ಅಸಾಯಕರಿಗೆ ಸಹಾಯ ನೀಡಿದ್ದಾರೆ. ಯಾರಿಂದಲೂ ಪ್ರತಿಕ್ರಿಯೆ ಬಾರದಿದ್ದಾಗ ಅವರು ತಕರಾರು ಮಾಡಿಲ್ಲ. ಮಾತೆಯವರು ಪರಮೇಶ್ವರ ತತ್ವಕ್ಕೆ ಉತ್ತರ ರೂಪವಾಗಿ ಅವತಾರ ಮಾಡಿದ್ದಾರೆ. ಪೃಥ್ವಿ ತತ್ವದ ಕರೆಗೆ ಓಗೊಟ್ಟು ಬಂದು ಅದರ ಆಹ್ವಾನವನ್ನು ಅಥವಾ ಸವಾಲನ್ನು ಸ್ವೀಕರಿಸಿದ್ದಾರೆ. ತನ್ನ ಉನ್ನತ ಶಕ್ತಿ, ಜ್ಞಾನಗಳಿಂದೊಡಗೂಡಿ ಪ್ರೀತಿಯ ಸಾಮರ್ಥ್ಯದಿಂದ ಪ್ರಕೃತಿ ತತ್ವವನ್ನು ಉದ್ಧರಿಸಿ ಮಾನವತೆಯನ್ನು ದೇವತ್ವದ ಮಟ್ಟಕ್ಕೆ ಎತ್ತಲು ಕೆಳಗಿಳಿದಿದ್ದಾರೆ. ಇಂತಹ ಸೂಕ್ಷ್ಮವಾದ ಬಳಕುವ ದೇಹದಲ್ಲಿ ತಾನಿದ್ದುಕೊಂಡು ಮಹಾಮಾತೆಯವರು ನಿಮಾತೀತವಾದ ಸಹನೆಯಿಂದ ಅತ್ಯಂತ ಚಿಕಿತ್ಸಕ ಪರಿಶ್ರಮದಿಂದ ಈ ಗುರಿಯನ್ನು ಸಾಧಿಸಲು ಹೆಣಗಾಡಿದ್ದಾರೆ, ಹೋರಾಡಿದ್ದಾರೆ. ಈ ಅಸ್ಥಿರ ದೇಹವನ್ನೇ ಈ ಸಾಧನೆಗಾಗಿ ಮುಡಿಪಾಗಿಟ್ಟಿದ್ದಾರೆ.

ಮಾತೆಯವರು ಸುಪ್ರಮಾನ ಶಕ್ತಿಯನ್ನು, ಸತ್ಯ ಪ್ರಜ್ಞೆಯನ್ನು ಈ ಪೃಥ್ವಿಸ್ತರದ ಮೇಲೆ ತಂದಿಳಿಸಿದ್ದಾರೆ ಎಂಬುದು ವಿದಿತ. ಇದರಿಂದಾಗಿ ಪ್ರತಿಯೊಬ್ಬ ಸ್ತ್ರೀ ಪುರುಷರು ದೈವೀ ಜೀವನವನ್ನು ಈ ಭೂಮಿಯ ಮೇಲೆ ಕಾಣುವ ಸಾಧ್ಯತೆಯನ್ನು ಉಂಟುಮಾಡಿದ್ದಾರೆ.

ಮಾತೆಯವರು ತಮ್ಮ ಆದರ್ಶವನ್ನು ಸಾಧಿಸಿದ್ದಾರೆಯೆ? ತಮ್ಮ ಉದ್ದೇಶವನ್ನು ಈಡೇರಿಸಿದ್ದಾರೆಯೆ? ಅವರ ಉದ್ದೇಶವು ಈಡೇರಿದೆ ಎಂದೇ ಹೇಳಬೇಕು 1956, ಫೆಬ್ರುವರಿ 29, ಸಾಯಂಕಾಲದ ಪ್ರಾರ್ಥನಾ ಸಮಯದಲ್ಲಿ ಅತಿಮಾನಸ ಚೇತನವು ಸ್ವರ್ಗದ ಸುವರ್ಣ ದ್ವಾರವನ್ನು ಭೇದಿಸಿ ಮಹಾಪೂರವಾಗಿ ಭೂಮಿಗೆ ಅವತರಿಸಿದಂದೆಯೇ ಮಾತೆಯವರ ಉದ್ದೇಶವು ಈಡೇರಿದೆ ಎಂದೇ ಹೇಳಬೇಕು.

ಶ್ರೀ ಅರವಿಂದರ ಮಹಾಸಮಾಧಿಯ ನಂತರ ಮಾತೆಯವರು ನಿರ್ವಹಿಸಿದ ಪಾತ್ರವು ಅತ್ಯದ್ಭುತವಾದದ್ದು. ಶ್ರೀ ಅರವಿಂದರು ತಾವು ಈ ಪೃಥ್ವಿಯಿಂ ನಿರ್ಗಮಿಸಬೇಕೆಂದು ನಿರ್ಧರಿಸಿದ್ದರು ತಮ್ಮ ದೇಹವನ್ನು ಹೋಮಿಸಿದರು. ಅತಿಮಾನಸ ಚೇತನದ ಅವತಾರದೊಂದಿಗೆ ಅವರ ದೇಹವು ಭಗ್ನವಾಗಿತ್ತು. ಅದೇ ಮಹಾ ಯಜ್ಞ. ಆ ಅತಿಮಾನಸ ಪ್ರಜ್ಞೆಯು ಶ್ರೀ ಅರವಿಂದರ ದೇಹದಲ್ಲಿ ನೆಲಸಿದಾಕ್ಷಣವೇ ತೇಜೋಮಾನಸವು ತಾಯಿಯವರಲ್ಲಿ ಉದಯವಾಯಿತು. ತೇಜೋಮಾನಸವೆಂದರೆ ಸುಪ್ರಮಾನಸ ಪ್ರಜ್ಞೆಯಿಂದ ನಿಯಂತ್ರಿಸಲ್ಪಟ್ಟ ಸ್ಥೂಲ ಮನಸ್ಸು. ಇದು 1950ರಲ್ಲಿ ಸಂಭವಿಸಿತು.

ಶ್ರೀ ಅರವಿಂದರು ಮಹಾಸಮಾಧಿಯನ್ನು ಹೊಂದಿದಾಗ ಆಶ್ರಮದ ತುಂಬೆಲ್ಲ ಮಹಾಕಾವಳವು ಕವಿದಿತ್ತು. ಮಾತೆಯವರು ಸಕಲನಿಯಂತ್ರಣವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು. ಜನತೆಯಲ್ಲಿ ವಿಶ್ವಾಸವನ್ನು ಹುಟ್ಟಿಸಿದರು. ಶ್ರದ್ಧೆಯನ್ನು ಬೆಳೆಸಿದರು. ಪ್ರಸನ್ನತೆಯನ್ನು ಮೂಡಿಸಿದರು. ಇದರಿಂದ ಪ್ರತಿಯೊಬ್ಬ ಸಾಧಕನೂ ನವಚೇತನವನ್ನು ಪಡೆದನು. ಶ್ರೀ ಅರವಿಂದರು ತಮಗಿತ್ತ ಆಶ್ವಾಸನೆಯನ್ನು ಪ್ರಕಟ ಪಡಿಸಿದರು. ಆ ಆಶ್ವಾಸನೆ, ಏನೆಂದರೆ, ಸತ್ಯ ಪ್ರಜ್ಞೆಯು ಈ ಭೂಮಿಯ ಮೇಲೆ ಸ್ಥಾಪಿಸಲ್ಪಡುವವರೆಗೆ ತಾವು ಭೂಮಿಯ ವಾಯು ಮಂಡಲವನ್ನು ಬಿಟ್ಟು ಹೋಗುವುದಿಲ್ಲ ಎಂಬುದು.

ಇದರಿಂದ ಧೈರ್ಯಗೊಂಡ ಮಾತೆಯವರು ತಮ್ಮ ಕಾಯಕವನ್ನು ಕಲಿತನದಿಂದ ಮುಂದುವರೆಸಿಕೊಂಡು ನಡೆದರು. 1956ಕ್ಕೆ ಕೆಲವು ಕಾಲ ಮುಂಚೆ ಆ ವರುಷವು ಅತಿಮಾನಸ ಪ್ರಜ್ಞೆಯು ಭೂಮಿಗೆ ಅವತರಿಸುವುದನ್ನು ಕಾಣುವದು ಎಂಬುವುದನ್ನು ಮುನಗಂಡಿದ್ದರು. 1956ರ ಹೊಸ ವರುಷದ ಸಂದೇಶದಲ್ಲಿ ಅವರು ಹೇಳಿದರು. ಮಹಾ ವಿಜಯಗಳು ಏನೂ ಸದ್ದಿಲ್ಲದೆ ಸಾಧಿಸಲ್ಪಡುತ್ತವೆ. ಹೊಸ ಜಗತ್ತಿನ ಅವತಾರವು ಡಂಗುರದಿಂದ ಘೋಷಿಸಲ್ಪಡುವದಿಲ್ಲ.

ಅತಿಮಾನಸ ಅವತಾರವು ಒಂದು ಐತಿಹಾಸಿಕ ಸಂಗತಿ ಎನಿಸಿಕೊಂಡಿದೆ. 1956, ಫೆಬ್ರುವರಿ 29 ರಂದು ಆ ಐತಿಹಾಸಿಕ ಸತ್ಯ ಘಟನೆ ಸಂಭವಿಸಿತು. ಆದರೆ ಮುಂದಿನ ನಾಲ್ಕು ವರ್ಷಗಳ ದೀರ್ಘ ಕಾಲದ ವರೆಗೆ ಮಾತೆಯವರು ಇದನ್ನು ಪ್ರಕಟ ಮಾಡಿರಲಿಲ್ಲ. ಅವರ

ಬಗ್ಗೆ ಪ್ರಚ್ಛನ್ನವಾಗಿ ಸೂಚನೆಗಳನ್ನು ಮಾತ್ರ ಕೊಟ್ಟಿದ್ದರು. ಈ ಅತಿಮಾನಸ ಅವತಾರದ ಬಗ್ಗೆ 60ನೆಯ ಫೆಬ್ರುವರಿ 29 ರಂದು, 1956ರ ಸಂಜೆಯ ಸಾಮಾನ್ಯ ಧ್ಯಾನ ಸಭೆಯಲ್ಲಿ ನಡೆದ ದೈವೀ ಘಟನೆಯನ್ನು ಮಾತೆಯವರು ಹೀಗೆ ಉಲ್ಲೇಖಿಸಿದ್ದಾರೆ.

"ಈ ಸಂಜೆ ದೈವೀ ಸಾಕ್ಷಾತ್ಕಾರವು ಮೂರ್ತಿಮಂತಾಗಿ ವಾಸ್ತವಿಕವಾಗಿ ನಿಮ್ಮ ಕಣ್ಣೆದುರಿಗೇ ಉಪಸ್ಥಿತವಾಗಿತ್ತು. ನಾನು ಸ್ವರ್ಣಮಯವಾದ ಸಜೀವ ಆಕಾರವನ್ನು ತಾಳಿ ವಿಶ್ವದಾಚೆಗಿನ ಬೃಹದ್ ರೂಪವನ್ನು ತಾಳಿದ್ದೆ; ಮತ್ತು ಈ ಜಗತ್ತನ್ನು ದೈವೀ ಜಗತ್ತನ್ನು ಬೇರ್ಪಡಿಸುವ ಭವ್ಯವಾದ ಬೃಹದಾಕಾರದ ಒಂದು ಸುವರ್ಣ ದ್ವಾರದ ಎದುರಿಗೆ ನಿಂತಿದ್ದೆ.

ನಾನು ಆ ದ್ವಾರವನ್ನು ನೋಡುನೋಡುತ್ತಿದ್ದಂತೆ ಆ ಪ್ರಜ್ಞಾಪೂರ್ಣ ಏಕ ಮಾತ್ರ ನಿಮಿಷದಲ್ಲಿ ಅದರ ರಹಸ್ಯವನ್ನು ಅರಿತುಕೊಂಡೆ ಮತ್ತು "ಆ ಕಾಲವೀಗ ಸನ್ನಿಹಿತವಾಗಿದೆ," ಎಂದು ಸಂಕಲ್ಪಿಸಿದೆ. ನನ್ನ ಎರಡು ಕೈಗಳಿಂದ ಭಾರವಾದ ಒಂದು ಸುವರ್ಣ ಸುತ್ತಿಗೆಯನ್ನು ಎತ್ತಿಕೊಂಡು ಒಂದು ಏಟನ್ನು ಒಂದೇ ಒಂದು ಏಟನ್ನು ಆ ದ್ವಾರದ ಮೇಲೆ ಕೊಟ್ಟೆ. ಅಗ ದ್ವಾರವು ತುಂಡು ತುಂಡಾಗಿ ಭಗ್ನವಾಯಿತು.

ಆಮೇಲೆ ಸುಪ್ರಮಾನಸ ಪ್ರಕಾಶವೂ, ಶಕ್ತಿಯೂ, ಪ್ರಜ್ಞೆಯೂ ಅವ್ಯಾಹತವಾದ ಒಂದು ಮಹಾಪೂರವಾಗಿ ಭೂಮಿಯ ಮೇಲೆ ನುಗ್ಗಿ ಹರಿಯಿತು.

1956ರಲ್ಲಿ ಅತಿಮಾನಸ ಪ್ರಜ್ಞೆಯು ಭೂಮಿಗೆ ಅವತರಿಸಿದಾಗ ಅದಿನ್ನೂ ವ್ಯಾಪಕವಾಗಿ ವಿಸ್ತರಿಸುತ್ತ ಪೃಥ್ವಿಯ ವಾತಾವರಣದಲ್ಲಿ ಆ ದಿವ್ಯ ಪ್ರಜ್ಞೆಯ ತರಂಗಗಳು ಏಕರೂಪವಾಗಿ ಒಂದು ಹೊಸ ವಾತಾವರಣವನ್ನು ನಿರ್ಮಿಸುವ ಪ್ರಶ್ನೆ ಇದ್ದಿತು. ಈ ಕಾರ್ಯವನ್ನು ಮಾತೆಯವರು ಕೊನೆಯ ಗಳಿಗೆಯ ವರೆಗೂ ಸಾಧಿಸುತ್ತಲೇ ಬಂದರು.ಈ ಅವತಾರವನ್ನು ಕುರಿತು ಒಂದೆಡೆಯಲ್ಲಿ ಹೀಗೆ ವಿಶದ ಪಡಿಸಿದ್ದಾರೆ. "1956ರ ಫೆಬ್ರುವರಿ 29 ರಂದು ಏನು ಸಂಭವಿಸಿತು ಎಂಬುದು ಒಂದು ಸ್ವಪ್ನರೂಪ ಅಥವಾ ಅನುಭವರೂಪಿ ಆದ ಘಟನೆಯಲ್ಲ. ಆ ಸಂಜೆ ಕ್ರೀಡಾ ಮೈದಾನದಲ್ಲಿ ಧ್ಯಾನದ ಕಾಲಕ್ಕೆ ನಾನು ಅತಿಮಾನಸ ಸ್ತರಕ್ಕೆ ಏರಿದೆ. ಆ ಕ್ಷಣಕ್ಕೆ ಏನೋ ಸಾಧಿಸಲ್ಪಡಬೇಕು ಎನಿಸಿತು. ಹಾಗೆಯೇ ಅದನ್ನು ಸಾಧಿಸಿಬಿಟ್ಟೆ. ಎಂದರೆ ಇದು ಕನಸಲ್ಲ, ಸಾಕ್ಷಾತ್ತಾಗಿ ನನಸು. "ಕಾಲವು ಸನ್ನಿಹಿತವಾಗಿದೆ." ಎಂಬ ಶಬ್ದಗಳು ಮಹತ್ವದವಾಗಿವೆ. ಆ ಶಬ್ದಗಳು ಆ ಕ್ಷಣದಲ್ಲಿ ಶ್ರೀ ಅರವಿಂದರ ಧ್ವನಿಯಲ್ಲಿ ಮಾತೆಯವರಿಗೆ ಕೇಳ ಬಂದವು. ಮುಂದೇನಾಯಿತು ? ಮಾತೆಯವರ ಶಬ್ದಗಳಲ್ಲಿಯೇ ಕೇಳಿರಿ. "ಅತಿಮಾನಸ ಮಟ್ಟದಿಂದ ನಾನು ಪ್ರಕಾಶದ ಮಹಾಪೂರವು ಭೂಮಿಯ ತುಂಬೆಲ್ಲ ಬೀಸಿ ಹೋದಾಗ ಈ ಮಹಾಪೂರವು ಅತ್ಯದ್ಭುತವಾದುದರಿಂದ ನನ್ನ ಸುತ್ತಲೂ ಕುಳಿತವರೆಲ್ಲರೂ ಅದರ ಒತ್ತಡಕ್ಕೆ ಭೂಮಿಯ ಮೇಲೆ ಮಲಗಿ ಹೋಗಿರಬೇಕು, ಎಂದು ಭಾವಿಸಿದೆ. ಆದರೆ ಕಣ್ಣು ತೆಗೆದು ನೋಡಿದಾಗ ಪ್ರತಿಯೊಬ್ಬರೂ ಶಾಂತವಾಗಿ ಕುಳಿತಿದ್ದುದ್ದನ್ನು ಕಂಡೆ. ಅವರಿಗೆ ಏನು ನಡೆಯಿತು ಎಂಬುದರ ಬಗ್ಗೆ ಅರಿವೇ ಇದ್ದಂತೆ ತೋರಲಿಲ್ಲ."

ಈ ಅತಿಮಾನಸ ಅವತಾರದ ಕಾರ್ಯವು ಡಿಸೆಂಬರ್ 1950 ರಿಂದಲೇ ನಡೆದಿದ್ದಿತು ಎಂಬುದನ್ನು ಮಾತೆಯವರು ಸ್ಥಿರೀಕರಿಸಿದ್ದಾರೆ. ತಮ್ಮ ದಿನಚರಿಯಲ್ಲಿ ಅವರು ಹೀಗೂ ಹೇಳುತ್ತಾರೆ, "ಜನೆವರಿ 1956ರಲ್ಲಿ ಶ್ರೀ ಅರವಿಂದರು ನನಗೆ ಎರಡು ಮೂರು ಸಲ ಕಾಣಿಸಿಕೊಂಡು ಅತಿಮಾನಸ ಅವತಾರವು ಬರಲಿದೆ ಎಂಬುದನ್ನು ಸೂಚಿಸಿದರು. ಆದರೆ ಅದು ಅವತಾರವಾದಾಗ ಒಮ್ಮಿಂದೊಮ್ಮೆಲೇ ಸಂಭವಿಸಿದ್ದಿತು. ಶ್ರೀ ಅರವಿಂದರು ತಮಗೆ ಕಾಣಿಸಿಕೊಂಡಿದ್ದರು ಎಂಬುದನ್ನಷ್ಟೇ ಓದಿದರೂ ಸಾಕು ವೈನವಿರೇಳುತ್ತದೆ. ಆದರೆ ಅದೊಂದು ತೀರ ವಾಡಿಕೆಯ ಸಂಗತಿ ಎಂಬಂತೆ ತಾಯಿಯವರು ಬರೆಯುತ್ತಾರೆ. ಅದರ ಆಕಸ್ಮಿಕತೆಯನ್ನು ಕುರಿತು ಅವರು ಹೇಳುತ್ತಾರೆ. "ನನ್ನ ಮಹತ್ವದ ಅನುಭವಗಳೆಲ್ಲವೂ ಇದೇ ರೀತಿ ನಡೆದಿವೆ. ನಾನು ನನ್ನ ವಾಡಿಕೆಯ ಪ್ರಜ್ಞೆಯಲ್ಲಿರುವಾಗಲೇ ಇಂತಹ ಘಟನೆಗಳು ಆಕಸ್ಮಿಕವಾಗಿ ತಮ್ಮ ಸತ್ಯತೆಯನ್ನು ಸ್ಥಿರೀಕರಿಸಲೆಂದು ಇಷ್ಟೊಂದು ಸುಸ್ಪಷ್ಟವಾಗಿ ನಡೆದು ಹೋಗುತ್ತವೆ. ಈ ಅನುಭವದ ವಿಷಯವಾಗಿ ಹೇಳಬೇಕೆಂದರೆ ಈ ಪ್ರಜ್ಞೆಯು ಮೂಡಿ ಬಂದಾಗ ನಾನು ಆಗಲೇ ಆ ಸುವರ್ಣ ದ್ವಾರದ ಎಡೆಯಲ್ಲಿದ್ದೆ. ಎಲ್ಲೆಡೆಗೂ ದಿವ್ಯ ಪ್ರಕಾಶವು ಹರಡಿತ್ತು."

ಈ ಬಗೆಯ ಅವತಾರದ ಕಲ್ಪನೆ ಬರಬೇಕಾದರೆ ಮಾನಸಿಕವಾಗಿ ವಿಚಾರ ಮಾಡುವವರಿಗಿಂತ ಹೃದಯಸ್ಥವಾಗಿ ವಿಚಾರ ಮಾಡುವವರಿಗೇ ಹೆಚ್ಚು ಸ್ಪಷ್ಟ ಕಲ್ಪನೆ ಬರುವದು. ತಮಗೆ ಈ ಅನುಭವವು ಉಂಟಾದ ಅವಧಿ ಎಷ್ಟರದು ಎಂಬ ಬಗೆಗೂ ಮಾತೆಯವರು ಹೇಳುತ್ತಾರೆ.

"ಆ ಪ್ರಕಾಶವು ಇಪ್ಪತ್ತು ನಿಮಿಷಗಳ ಪರ್ಯಂತ ಧಾರಾಕಾರವಾಗಿ ಸುರಿಯತೊಡಗಿತು. ಅಥವಾ ನಾನೇ ಅದನ್ನು ಇಪ್ಪತ್ತು ಸಿಮಿಷಗಳ ವರೆಗೆ ಸಿರೀಕ್ಷಿಸುತ್ತಿದ್ದು ಆಮೇಲೆ ನನ್ನ ಧ್ಯಾನವನ್ನು ನಿಲ್ಲಿಸಿದೆ. ನನ್ನ ಧ್ಯಾನವನ್ನು ಅನಿಯತ ಕಾಲದ ವರೆಗೆ ನಡೆಸುವುದು ಶಕ್ಯವಿರಲಿಲ್ಲ. ಕೆಲವು ವೇಳೆಯ ನಂತರ ಧ್ಯಾನ ಮಾಡುವವರು ಅವಿಶ್ರಾಂತಗೊಳ್ಳುತ್ತಾರೆ. ನಾನು ಬಾಹ್ಯ ಪ್ರಜ್ಞೆಗೆ ತಿರುಗಲು ವಿಶೇಷ ಪ್ರಯತ್ನ ಮಾಡಬೇಕಾಯಿತು. ನನಗೆ ಒಂದು ಮಾತನಾಡುವುದು ಕೂಡ ಕಷ್ಟ ಸಾಧ್ಯವೆನಿಸಿತು."

ಈ ಪ್ರಕಾಶದ ಅವತರಣವು ಧಾರಾಕಾರವಾಗಿತ್ತೆಂದು ತಾಯಿಯವರೇ ವರ್ಣಿಸಿದ್ದಾರೆ. ಈ ವಿಶ್ವಾವತಾರವು ಸೂಕ್ಷ್ಮ ಭೌತಿಕದಲ್ಲಿ ನಡೆಯಿತು. ಆದುದರಿಂದ ಬಾಹ್ಯ ಭೌತಿಕದಲ್ಲಿ ಏನೂ ಕಂಡಿರಲಿಲ್ಲ ತಾಯಿಯವರು ಹೇಳುತ್ತಾರೆ. "ಆದಾಗ್ಯೂ ಪ್ರಕೃತಿಯು ಈ ಅತಿಮಾನಸವನ್ನು ನಿರಾಕರಿಸಲಿಲ್ಲ. ಆದರೆ ಈ ಸುಪ್ರಮಾನಸವು ಭೂಮಿಯನ್ನು ಪೂರ್ತಿಯಾಗಿ ವ್ಯಾಪಿಸಿಲ್ಲ. ಇದನ್ನು ಅದು ಕ್ರಮೇಣ ಸಾಧಿಸಬೇಕಾಗಿದೆ." ಈ ಹೊಸ ಪ್ರಜ್ಞೆಯು ಇಲ್ಲಿಯವರೆಗೂ ಭೂಮಂಡಲವನ್ನು ಎಷ್ಟು ಮಟ್ಟಿಗೆ ವ್ಯಾಪಿಸಿದೆ ಎಂಬುದು ನಮಗೆ ತಿಳಿದಿಲ್ಲ. ಆದರೆ ಶ್ರೀ ಅರವಿಂದರೂ, ಶ್ರೀ ಮಾತೆಯವರೂ ಈ ಕಾರ್ಯವನ್ನು ಕೈಕೊಂಡಿದ್ದಾರೆ. ಅವರ ಅಭಿವಚನವು ನಮ್ಮ ಮುಂದಿದೆ. ಈ ಅವತಾರದ ಪರಿಣಾಮವು ಜಾಗತಿಕ ಆಗುಹೋಗುಗಳಲ್ಲಿ ಸೂಕ್ಷ್ಮವಾಗಿ ಕಂಡುಬರುತ್ತಿದೆ. ಮೂರನೆಯ ಮಹಾಯುದ್ಧವು ಶಕ್ಯವಿಲ್ಲ, ಎಂಬುದು ಈ ಅವತಾರದ ಪರಿಣಾಮವಾಗಿದೆ, ಎಂದು ಆಶ್ರಮದ ಸಾಧಕರು ಹೇಳುತ್ತಾರೆ. "ಈ ದೆಸೆಯಲ್ಲಿ ಶ್ರೀ ಅರವಿಂದರೇ ನನ್ನ ಮುಖಾಂತರವಾಗಿ ಈ ಕಾರ್ಯವನ್ನು ಮಾಡುತ್ತಿದ್ದಾರೆ" ಎಂದು ಮಾತೆಯವರು ಹೇಳಿದ್ದಾರೆ. ಮತ್ತು ಅತಿಮಾನಸ ಪ್ರಜ್ಞೆಯುಳ್ಳ, ಅತಿಮಾನಸ ಶರೀರವುಳ್ಳ ಒಂದು ಜನಾಂಗವು ಈ ಪೃಥ್ವಿಯ ಮೇಲೆ ತಲೆಯೆತ್ತಲಿದೆ ಎಂದೂ ಅವರು ಹೇಳುತ್ತಾರೆ. ಆದರೆ ಯಾವಾಗ ? ಇದು ಮೂರುನೂರು ವರ್ಷಗಳಾಗಬಹುದು, ಅದಕ್ಕೂ ಹೆಚ್ಚಾಗಬಹುದು. ಅತಿಮಾನಸ ಶರೀರದ ಅವತಾರದ ಬಗ್ಗೆ ಮಾತೆಯವರು ಹೆಜ್ಜೆ ಹೆಜ್ಜೆಯಾಗಿ ತಮ್ಮ ದಿನಚರಿಗಳಲ್ಲಿ ಬರೆಯುತ್ತ ಬಂದಿದ್ದಾರೆ. 1930ರಲ್ಲಿಯೂ ಅವರು ಬರೆಯುತ್ತಾರೆ. "ಶ್ರೀ ಅರವಿಂದರ ಕಾರ್ಯವೆಂದರೆ ಪರಿಪೂರ್ಣವಾದ ಪೃಥ್ವಿಯ ಪರಿವರ್ತನೆ. ಈ ಮಾನಸಿಕ ಸ್ತರವನ್ನು ದಾಟಿ ಪ್ರಜಾಸತ್ತೆಯ ಅನೇಕ ಸ್ತರಗಳು ಇವೆ. ಅವುಗಳಲ್ಲಿ ನಿಜವಾಗಿಯೂ ದೈವೀ ಜಗತ್ತು ಒಂದಿದೆ. ಅದನ್ನೇ ಶ್ರೀ ಅರವಿಂದರು ಸುಪ್ರಸಿದ್ಧಮಾನಸ ಅಥವಾ ಸತ್ಯಲೋಕ ಎಂದು ಕರೆದರು. ಈ ಸುಪ್ರಮಾನಸ ನೇರವಾದ ಅವತಾರವೇ ಮತ್ತು ಅದರ ಪ್ರಭಾವವೇ ಜೀವನವನ್ನು ಆತ್ಮರೂಪವಾಗಿ ಪುನರ್ನಿರ್ಮಿಸಬಲ್ಲದು. ಈ ಕಾರ್ಯವು ಸೂರ್ಯ ಪ್ರಕಾಶದಷ್ಟು ಸ್ಪಷ್ಟ. ಇದರ ಬಗ್ಗೆ ಯಾವ ಸಂಶಯವೂ ಇಲ್ಲ. ಇದು ಕೇವಲ ಒಂದು ಪ್ರಯೋಗವಲ್ಲ. ಆದರೆ ಅನಿವಾರ್ಯವಾದ ಸುಪ್ರಮಾನಸದ ವಿಕಾಸಕ್ರಮ." ಈ ಸುಪ್ರಮಾನಸದ ಹೊಳಹುಗಳನ್ನು ಮಾತೆಯವರು 1914 ರಷ್ಟು ಪೂರ್ವದಲ್ಲಿಯೇ ಕಂಡುಕೊಂಡಿದ್ದರು. ಆ ಕಾಲಕ್ಕೇ ಸುಪ್ರಮಾನಸವು ಪೃಥ್ವಿಯನ್ನು ಮುಟ್ಟಿದ್ದಿತು ಎಂಬದನ್ನು ಅವರು ಕಂಡುಕೊಂಡಿದ್ದರು.

(ಮುಂದುವರೆಯುವುದು)

With best compliments from:

MALBAR KRISHNA BEEDIS
MANDIPET,
TUMKUR.

ಶ್ರೀ ಕ್ಷೇತ್ರದಲ್ಲಿ ಜಾತ್ರೆ

—ಬಿ. ಟಿ. ರಂಗಧಾಮಯ್ಯ

ಪ್ರತಿ ವರ್ಷವೂ ಮಹಾ ಶಿವರಾತ್ರಿಯ ಸಂದರ್ಭದಲ್ಲಿ ಶ್ರೀ ಕ್ಷೇತ್ರದಲ್ಲಿ ನಡೆಯುವ ಜಾತ್ರೆ ಲಕ್ಷಾಂತರ ಮಂದಿ ಭಕ್ತರನ್ನು ಆಕರ್ಷಿಸುತ್ತದೆ. ಆ ಸಂದರ್ಭದಲ್ಲಿ ಜರುಗುವ ಕಾರ್ಯ ಕಲಾಪಗಳ ಸಮೀಕ್ಷೆ ಇಲ್ಲಿದೆ

ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರ ರಥೋತ್ಸವವು 1909ರಲ್ಲಿ ಉದ್ಧಾನ ಶಿವಯೋಗೀಶ್ವರರಿಂದ ಚಿಕ್ಕ ಪ್ರಮಾಣದಲ್ಲಿ ಪ್ರಾರಂಭ ವಾಯಿತು. ಶ್ರೀಗಳವರು ಜಾತ್ರೆ ಮಾಡುವುದು, ದನಗಳ ಪರಿಷೆ ಸೇರಿಸುವುದು ಮುಖ್ಯವಲ್ಲ, ಯಾತ್ರೆಗಾಗಿ ಜಾತ್ರೆಗೆ ಬಂದ ಭಕ್ತರಿಗೆಲ್ಲಾ ಅನ್ನ ನೀಡುವುದು ಅತಿ ಮುಖ್ಯವೆಂದು ಸಂಕಲ್ಪ ಮಾಡಿದರು. ಶ್ರೀಗಳವರ ಸತ್ಸಂಕಲ್ಪವು ಇತೋಪ್ಯತಿಶಯವಾಗಿ ಇಂದಿಗೂ ನಡೆದು ಬರುತ್ತಿದೆ. ಇದು ಅದ್ಭುತ ಕಾರ್ಯವೇ ಸರಿ.

ಅಂದು ಒಂದೆರಡು ಚಿಕ್ಕ ಪ್ರಮಾಣದ ಉತ್ಸವ ಗಳಿಂದ ಪ್ರಾರಂಭವಾದ ಜಾತ್ರೆಯು ಇಂದು ಹದಿ ನೆಂಟಕ್ಕೂ ಮೇಲ್ಪಟ್ಟ ಉತ್ಸವಗಳಿಂದ ನಡೆಯುತ್ತಿದೆ. ಈ ಉತ್ಸವಗಳಲ್ಲಿ ರಥೋತ್ಸವ, ಬೆಳ್ಳಿ ಪಾಲಕಿ ಉತ್ಸವ ಮತ್ತು ತೆಪ್ಪೋತ್ಸವಗಳು ಬಹಳ ಪ್ರಸಿದ್ಧವಾದವು ಗಳಾಗಿರುತ್ತವೆ. ಅಂದರೆ ಇತರೆ ಉತ್ಸವಗಳು ಕಡಿಮೆ ಯೆಂದಲ್ಲ. ಎಲ್ಲ ಉತ್ಸವಗಳೂ ವಿದ್ಯುದ್ದೀಪಗಳಿಂದಲಕೃತ ವಾಗಿ ಬಾಣ ಬಿರುಸು ಮದ್ದು ಗುಂಡುಗಳ ವಿಶೇಷ ಆಕರ್ಷಣೆಗಳಿಂದ ಕೂಡಿ ಕನ್ನಡನಾಡಿನ ಎರಡು ಲಕ್ಷಕ್ಕೂ ಹೆಚ್ಚಿನ ಯಾತ್ರಿಕ ಜನರ ಮನವನ್ನು ಸೆಳೆದಿರುತ್ತವೆ. ಮತ್ತು ಮೆಚ್ಚುಗೆ ಪಡೆದಿರುತ್ತವೆ.

ಇದೇ ಜಾತ್ರೆಯ ಕಾಲದಲ್ಲಿ 1963ರಲ್ಲಿ ಪ್ರಾರಂಭ ವಾದ ವಸ್ತು ಪ್ರದರ್ಶನವು, ಪ್ರತಿದಿವಸವೂ ಸಾಯಂಕಾಲ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸ[illegible] ಕಲೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿರುತ್ತ[illegible] ಪ್ರಮಾಣ ದಲ್ಲಿ ಪ್ರಾರಂಭವಾದ ವಸ್ತು ಪ್ರದರ್ಶನವು ಇಂದು ರಾಜ್ಯ ಮಟ್ಟದ ವಸ್ತು ಪ್ರದರ್ಶನವೆನಿಸಿ ಪ್ರಖ್ಯಾತಿ ಪಡೆದಿರು ತ್ತದೆ. ಈ ಬಾರಿಯ ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ ಚಲನಚಿತ್ರ ನಟರು ಮತ್ತು ತಾರೆಯರೂ ಆದ, ಶ್ರೀ ವಿಷ್ಣುವರ್ಧನ್ ಮತ್ತು ಶ್ರೀಮತಿ ಭಾರತಿಯವರು, ಶ್ರೀಮತಿ ಉಮಾ ಶಿವಕುಮಾರ್‌ರವರೂ, ಕುಮಾರಿ ಮಂಜುಳಾ ಅವರೂ, ಶ್ರೀನಾಥ್‌ರವರೂ ಸಹ, ಶ್ರೀ ಕ್ಷೇತ್ರದ ಎಲ್ಲ ಕೆಲಸಕಾರ್ಯಗಳನ್ನೂ ಕಣ್ಣಾರೆಕಂಡು, ಸಂತಸಗೊಂಡು, ಶ್ರೀ ಶ್ರೀಗಳವರ ಮಹತ್ಸಾಧನೆಯನ್ನು ತುಂಬು ಹೃದಯದಿಂದ ವ್ಯಕ್ತಪಡಿಸುತ್ತಾ, ಶ್ರೀ ಕ್ಷೇತ್ರದ ವತಿಯಿಂದ ನಮಗೆ ಕರೆ ಬಂದಲ್ಲಿ ಪ್ರತಿವರ್ಷವೂ ತಾವೆ ಲ್ಲರೂ ಕಂಕಣಬದ್ಧರಾಗಿ ಬಂದು ತಮ್ಮ ಅಳಿಲು ಸೇವೆ ಯನ್ನು ಮಾಡಲು ಮತ್ತು ಶ್ರೀಗಳ ಕೃಪಾಶೀರ್ವಾದ ಪಡೆಯಲು ಸದಾ ಸಿದ್ಧವಾಗಿರುವುದಾಗಿ ಆಶ್ವಾಸನೆ ನೀಡಿ ದರು. ಶ್ರೀಯುತರಾದ ಶ್ರೀನಾಥ್‌ರವರು ಕನ್ನಡದ ಚಲನಚಿತ್ರ ಕಲಾವಿದರೆಲ್ಲಾ ಒಟ್ಟಾಗಿ ಸೇರಿ ವಸ್ತು ಪ್ರದರ್ಶನದ ರಂಗಮಂಟಪದಲ್ಲಿ ರಸಮಂಜರಿ ಕಾರ್ಯ ಕ್ರಮವನ್ನೇ ಕೊಡುವುದಾಗಿ ತಮ್ಮ ಹೆಬ್ಬಯಕೆಯನ್ನು ನೆರೆದಿದ್ದ ಪ್ರೇಕ್ಷಕರ ಸಮಕ್ಷಮ ಒತ್ತಿ ಹೇಳಿದರು. ಹೀಗೆ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ಇಂತಹ ಬೋಧನಾತ್ಮಕವಾದ ವ್ಯವಸಾಯ ಮತ್ತು ಕೈಗಾರಿಕಾ ವಸ್ತುಪ್ರದರ್ಶನವು ಇದಲ್ಲದೆ ಬೇರೊಂದಿಲ್ಲ. ವಸ್ತುಪ್ರದರ್ಶನವು ಪ್ರಜಾಸರ್ಕಾರವು ಮಾಡುತ್ತಿರುವ ಜನತಾ ಸೇವೆಯ ಕೃತ್ಯಗಳನ್ನು ಜನರ ಕಣ್ಮುಂದೆ ತೋರಿಸಿಕೊಡುತ್ತದೆ. ಈ ವಸ್ತು ಪ್ರದರ್ಶನದಲ್ಲಿ ಭಾಗ

ವಹಿಸುವಂತೆ ಘನ ಪ್ರಜಾಸರ್ಕಾರವು ಸರ್ಕಾರದ ಎಲ್ಲಾ ಇಲಾಖೆಗಳಿಗೂ ಖಾಯಂ ಆದ ಆದೇಶ ನೀಡುತ್ತಾ ಸಹಕರಿಸುತ್ತಿರುವುದು ಒಂದು ಸ್ತುತ್ಯಾರ್ಹ ವಿಷಯ ವಾಗಿರುತ್ತದೆ. ಇಂದಿನ ಬಾರಿ ವಸ್ತುಪ್ರದರ್ಶನವನ್ನು ಲಕ್ಷಾಂತರ ಗ್ರಾಮೀಣ ಬಂಧುಗಳು ಬಂದು ನೋಡಿ ಪ್ರೋತ್ಸಾಹವಿತ್ತಿರುತ್ತಾರೆಂಬುದು ಅತ್ಯಂತ ಹರ್ಷದಾಯಕ ಸಂಗತಿ.

ದನಗಳ ಜಾತ್ರೆಯಲ್ಲಿ ವಸ್ತು ಪ್ರದರ್ಶನ

ವಸ್ತು ಪ್ರದರ್ಶನದ ಮುಖ್ಯವಾದ ಎರಡು ಗುರಿ ಗಳೆಂದರೆ ಜನಗಳ ತಿಳುವಳಿಕೆಯನ್ನು ಹೆಚ್ಚಿಸುವುದು ಹಾಗೂ ವಿವಿಧ ಉದ್ಯಮಗಳಿಗೆ ತಾವು ತಯಾರಿಸಿದ ವಸ್ತುಗಳ ಪ್ರಚಾರ ಮತ್ತು ಮಾರಾಟಕ್ಕೆ ಅನುಕೂಲ ಮಾಡಿಕೊಡುವುದು. ಈ ಕಾರಣದಿಂದಾಗಿ ವಸ್ತು ಪ್ರದರ್ಶನವು ಒಂದು ಜನತಾ ಬಜಾರೂ ಹೌದು. ಅಂತೆಯೇ ಒಂದು ಸರ್ವವಿಷಯಿಕ ಜ್ಞಾನಭಂಡಾರವೂ ಹೌದು. ಇಂತಹ ಪ್ರದರ್ಶನಗಳಲ್ಲಿ ಜನ ಪ್ರಗತಿಯ ಚಿತ್ರವನ್ನು ತೋರಿಸುವ ವಿವಿಧ ವಸ್ತುಗಳ ಸಂಚಯ ವಿರುತ್ತದೆ. ಈ ವಸ್ತು ಪ್ರದರ್ಶನದಲ್ಲಿ ಹೈನುಗಾರಿಕೆ, ಭೂವಿಜ್ಞಾನ, ಪಶುಸಂಗೋಪನೆ ಖಾದಿಗ್ರಾಮೋದ್ಯೋಗ ವ್ಯವಸಾಯ, ಕೈಗಾರಿಕೆ, ಆರೋಗ್ಯ, ವಿದ್ಯಾಭ್ಯಾಸ, ಮೀನುಗಾರಿಕೆ, ಅರಣ್ಯ ಸಂಪತ್ತು, ವಿದ್ಯುಚ್ಛಕ್ತಿ ಬಳಕೆ, ಲೋಕೋಪಯೋಗಿ ಕಾರ್ಯಚಟುವಟಿಕೆ, ತೋಟಗಾರಿಕೆ ರೆಗ್ಯೂಲೇಟೆಡ್ ಮಾರುಕಟ್ಟೆಯ ಪ್ರಯೋಜನ, ರೇಷ್ಮೆ ಕೃಷಿ. ಪೋಲೀಸ್ ಇಲಾಖೆಯ ಜನತಾ ಸೇವೆ, ಗೃಹ ನಿರ್ಮಾಣ ಪ್ರದರ್ಶನ, ಟೌನ್‌ಪ್ಲಾನಿಂಗ್. ಬ್ಯಾಂಕುಗಳ ಸೌಲಭ್ಯಗಳು ಮತ್ತು ಸೇವೆ ಅಲ್ಲದೆ ಅನೇಕ ಉಡಿಗೆ ಗಳ ಆಟಸಾಮಾನುಗಳ ಭೂಷಣಾಲಂಕಾರ ವಸ್ತುಗಳ ವಿಭಾಗ ಗಳೂ, ಫೋಟೋ ಸ್ಟಾಲುಗಳು, ನಾಯಿಗಳ ಸರ್ಕಸ್ ಪ್ರದರ್ಶನ ಇನ್ನೂ ಮುಂತಾದ ಪ್ರದರ್ಶನಗಳು ಹೆಚ್ಚು ಜನರನ್ನು ಆಕರ್ಷಿಸುತ್ತವೆಂಬುದು ಸಹಜ ಸಂಗತಿ. ಗ್ರಾಮಾಂತರದಲ್ಲಿರುವ ಸಾಮಾನ್ಯ ಜನರಿಗೂ ಸಹ ದೇಶದ ಸರ್ವತೋಮುಖ ಪ್ರಗತಿಯ ದರ್ಶನ ಮಾಡಿಸಿ ಅವರಿಗೆ ಹೊಸ ವಿಷಯಗಳ ಅರಿವು ಉಂಟುಮಾಡಿಕೊಡ ಬೇಕೆಂಬ ಜನತಾ ಕಲ್ಯಾಣ ದೃಷ್ಟಿಯುಳ್ಳ ಸರಕಾರದ ಉದ್ದೇಶ ಸಾಧಿಸಬೇಕಾದರೆ ಇಂತಹ ವಸ್ತು ಪ್ರದರ್ಶನ ಗಳು ಖಾಯಂ ಆಗಿ ನಡೆಯುವಂತಾಗಬೇಕು. ವಸ್ತು ಪ್ರದರ್ಶನದಲ್ಲಿ ಕೇವಲ ಸಂಗ್ರಹ ವಸ್ತುಗಳನ್ನು ನೋಡಿ ಬೇಸರಾಗಬಾರದೆಂದು, ಸಂಜೆಯ ವೇಳೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕು. ಅಂದರೆ ಕಲಾತ್ಮಕವಾದ ಸಂಗೀತ, ನೃತ್ಯ, ನಾಟಕ, ಕೋಲಾಟ, ಬೋಧಪ್ರದವಾದ ಲಾವಣಿಗಳು ಮುಂತಾದವುಗಳಿರ ಬೇಕು. ಮೇಲ್ಕಂಡ ಕಾರ್ಯಕ್ರಮಗಳೆಲ್ಲವೂ ಸಮಾಜ ವನ್ನು ಸುಸಂಸ್ಕೃತ ಹಾದಿಯಲ್ಲಿ ನಡೆಸಿ ಉತ್ತಮ ಜೀವ ನಕ್ಕೆ ನೆರಗುಕೊಡುವಂತವುಗಳಾಗಿರಬೇಕು. ಅಂತೆಯೇ ಕಿರು ನಾಟಕಗಳಾಗಿ ಕೇವಲ ಎರಡು ಅಥವಾ ಎರಡೂವರೆ ಗಂಟೆಗಳಿಗೆ ಮೀರದಂತೆ ಇದ್ದು ನೀತಿಬೋಧಕ ವಸ್ತು ಪ್ರಧಾನವಾಗಿರಬೇಕು. ವಸ್ತು ಪ್ರದರ್ಶನವು ಮಕ್ಕಳಿಂದ ಹಿಡಿದು ಮುದುಕರಿಗೂ ಆನಂದವನ್ನು ತರುವಂತಹು ದಾಗಿರಬೇಕು. ಈ ದಿಸೆಯಲ್ಲಿ ಶ್ರೀ ಕ್ಷೇತ್ರದಲ್ಲಿ ನಡೆಯುವ ವಸ್ತು ಪ್ರದರ್ಶನವು ಸಾಕಷ್ಟು ಪ್ರಗತಿ ಸಾಧಿಸಿರುವುದನ್ನು ಇದನ್ನು ವೀಕ್ಷಿಸುತ್ತಿರುವ ಗ್ರಾಮಾಂತರ ಬಂಧುಗಳೂ, ಅಧಿಕಾರ ವರ್ಗದವರೂ, ತಜ್ಞರೂ ಮುಕ್ತಕಂಠದಿಂದ ಹೊಗಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಇನ್ನು ಶ್ರೀ ಕ್ಷೇತ್ರದಲ್ಲಿ ಈ ಬಾರಿಯೂ ಯಥಾ ರೀತಿ ಲಕ್ಷಾಂತರ ಮಂದಿ ಯಾತ್ರಿಕರಿಗೆ ಇಂತಹ ಅಭಾವ ಪರಿಸ್ಥಿತಿಯನ್ನೂ ಲಕ್ಷಿಸದೆ ಊಟದ ವ್ಯವಸ್ಥೆ ಮಾಡಿದ್ದುದು ಅವರ ಯೋಗಶಕ್ತಿಯ ಹಾಗೂ ಶ್ರೀಶ್ರೀಗಳವರ ದೃಢ ಸಂಕಲ್ಪದ ಹಿರಿಮೆಯನ್ನು ತೋರಿಸುತ್ತದೆ. ಈ ಬಾರಿ ದನಕರುಗಳಿಗೆ ನೀರಿನ ಪೂರೈಕೆಯ ವಿಷಯದಲ್ಲಿ ಶ್ರೀ ಶ್ರೀ ಗಳವರು ಕೈಗೊಂಡ ಮುನ್ನೆಚ್ಚರಿಕೆಯ ಕ್ರಮ ವರ್ಣನಾ ತೀತ. ಮೈಲಿಗಟ್ಟಳೆ ದೂರದ ಬಾವಿಗಳಿಂದ ಜಾತ್ರೆ ನೇರುವ ಪ್ರದೇಶಕ್ಕೆ ಕಟ್ಟೆಗಳಿಗೆ ಒಂದು ತಿಂಗಳು ಮುಂಚಿತ ವಾಗಿಯೇ ನೀರನ್ನು ಪಂಪುಗಳಿಂದ ಎತ್ತಿ ಕೊಳವೆ ಹಾಗೂ ಕಾಲುವೆಗಳ ಮೂಲಕ ರವಾನಿಸಲಾಯಿತು. ಇದ ಕ್ಕಾಗಿ ತಗುಲಿದ ಅತಿ ಹೆಚ್ಚಿನ ವೆಚ್ಚವನ್ನು ಕುರಿತು ಯೋಚಿಸಿದವರಲ್ಲ. ಜನತೆಗೆ ಹಾಗೂ ರಾಸುಗಳಿಗೆ ತೊಂದರೆಯಾಗದಿದ್ದರೆ ಸರಿ ಎಂಬ ಸದುದ್ದೇಶದ ಮುಂದೆ ವೆಚ್ಚ ತೃಣಸಮಾನವಾಗಿ ಶ್ರೀ ಶ್ರೀಗಳವರಿಗೆ ಕಂಡಿದ್ದು ಆಚ್ಚರಿಯೇನಲ್ಲ.

[26ನೇ ಪುಟ ನೋಡಿ]

ಪೌರಾಣಿಕ ಕತೆ

ಸಂದೀಪಕ

—ದಿಗಂಬರ ಜೋಶಿ

ಗುರುಸೇವೆಗಿಂತಲೂ ಮಿಗಿಲಾದ ಪರಮಾರ್ಥ ವಿನ್ನೊಂದುಂಟೇ?

ಎಷ್ಟು ಪರಿಯಿಂದ ಸೇವೆಯನ್ನು ಮಾಡಿದರೂ ಸಂದೀಪಕನಿಗೆ ಬೈಗುಳಗಳೇನೂ ತಪ್ಪಿದ್ದಲ್ಲ. ಆತನ ಗುರು ವೇದಧರ್ಮರು ಅಪಸ್ಮಾರದಿಂದ ಬಳಲುತ್ತಿದ್ದಾರೆ. ಸಂದೀಪಕನು ಏಕನಿಷ್ಠೆಯಿಂದ ಗುರುಗಳ ಸೇವೆ ಮಾಡುತ್ತಿದ್ದಾನೆ. ದಿನಾಲು ಅವರಿಗೆ ಸ್ನಾನ ಮಾಡಿಸುವುದು; ಮಡಿ ಬಟ್ಟೆಗಳನ್ನು ತೊಡಿಸುವುದು; ಭಿಕ್ಷಾನ್ನವನ್ನು ತಂದು ಊಟಕ್ಕೆ ನೀಡುವುದು; ಗುರುಗಳ ಬಳಿಯಲ್ಲಿ ಕುಳಿತು ಪುರಾಣಗಳನ್ನು ಓದುವುದು; ಅವನ ಕೆಲಸಗಳು. ಕಾಶಿಯಲ್ಲಿಯೇ ವಾಸವಾಗಿದ್ದರೂ ಗುರುಗಳ ಸೇವೆಯಲ್ಲಿ ಆತನಿಗೆ ವಿಶ್ವೇಶ್ವರನ ದರ್ಶನಕ್ಕೂ ಹೋಗಲು ಸಾಧ್ಯವಾಗಿಲ್ಲ. ಆ ಇಚ್ಛೆಯೂ ಆತನಿಗಿಲ್ಲ. ಆತನ ಪಾಲಿಗೆ ಗುರುಗಳೇ ಸರ್ವಸ್ವ. ಅವರೇ ಬ್ರಹ್ಮವಿಷ್ಣು ಮಹೇಶ್ವರ ಎಲ್ಲ.

ಆದರೆ ರೋಗ ಗ್ರಸ್ತನಾದ ವೇದಧರ್ಮ ಮಾತ್ರ ಯಾವಾಗಲೂ ಸಿಡಿಪಿಡಿ ಮಾಡುತ್ತಿರುತ್ತಾನೆ. ಶಿಷ್ಯನ ಸೇವೆಯಲ್ಲಿ ಏನಾದರೂ ದೋಷವನ್ನು ಹುಡುಕಿ ಆತನ ಮೇಲೆ ಹರಿಹಾಯುತ್ತಾನೆ. ಭಿಕ್ಷಾನ್ನವನ್ನು ತಂದು ನೀಡಿದರೆ ಮೃಷ್ಟಾನ್ನವನ್ನು ಏಕೆ ತರಲಿಲ್ಲವೆಂದು ಸಿಟ್ಟಾಗುತ್ತಾನೆ. ಮೃಷ್ಟಾನ್ನವನ್ನು ತಂದು ನೀಡಿದರೆ ಇನ್ನಷ್ಟು ಏಕೆ ತರಲಿಲ್ಲವೆಂದು ಬಡಿಯಲು ಹೋಗುತ್ತಾನೆ ತನ್ನ ಮೈಮೇಲೆ ಕುಳಿತ ನೊಣಗಳನ್ನು ಜಾಡಿಸುವುದಿಲ್ಲವೆಂದು ಆಕ್ಷೇಪಿಸುತ್ತಾನೆ. ಒಮ್ಮೊಮ್ಮೆ ಕರುಣೆ ಮೂಡಿತೆಂದರೆ 'ನನ್ನಿಂದ ನಿನಗೆಷ್ಟು ತ್ರಾಸು?' ಎಂದು ಕನಿಕರವನ್ನೂ ತೋರಿಸುತ್ತಾನೆ.

'ಸುಖದುಃಖೇ ಸಮೇಕೃತ್ವಾ' ಎಂಬಂತೆ ಸಂದೀಪಕನಿಗೆ ಮಾತ್ರ ಇವಾವುದರ ಕಡೆಗೂ ಲಕ್ಷ್ಯವಿಲ್ಲ. ಗುರುಸೇವೆಯೊಂದೇ ತನ್ನ ಗುರಿ ಎಂದು ತಿಳಿದಿದ್ದಾನೆ. ಗುರುಗಳ ಹೊಗಳಿಕೆಯಿಂದ ಉಬ್ಬುವುದೂ ಇಲ್ಲ; ತೆಗಳಿಕೆಯಿಂದ ತಗ್ಗುವುದೂ ಇಲ್ಲ. ಒಂದಲ್ಲ, ಎರಡಲ್ಲ, ಇಪ್ಪತ್ತೊಂದು ವರ್ಷಗಳವರೆಗೆ ಒಮ್ಮನಸಿನಿಂದ ಗುರುಗಳ ಸೇವೆ ಮಾಡಿದ

ಈತನ ಗುರುಸೇವೆಯನ್ನು ಕಂಡು ವಿಶ್ವೇಶ್ವರನಿಗೂ ಕುತೂಹಲ. ಒಂದು ದಿನ ಸಂದೀಪಕನು ನದಿಯಲ್ಲಿ ಸ್ನಾನ ಮಾಡುವಾಗ ವಿಶ್ವೇಶ್ವರನು ಪ್ರತ್ಯಕ್ಷನಾದ. 'ವತ್ಸಾ ನಿನ್ನ ಗುರುಭಕ್ತಿಗೆ ಮೆಚ್ಚಿದ್ದೇನೆ ಬೇಕಾದ ವರಕೇಳು' ಎಂದ. ಸಂದೀಪಕನಿಗಾದರೊ ಗುರುವೇ ಸರ್ವಸ್ವ. ಗುರುಗಳನ್ನು ಕೇಳದೆ ಯಾವ ಕೆಲಸವನ್ನೂ ಮಾಡಲಾರ ಆತ ಗುರುಗಳ ಬಳಿಗೆ ಬಂದ. 'ಪರಮೇಶ್ವರ ಬಂದಿದ್ದಾನೆ. ವರಬೇಡು ಅನ್ನುತ್ತಿದ್ದಾನೆ. ತಮಗೆ ಗುಣವಾಗಲೆಂದು ವರಬೇಡಲೇ?' ಎಂದ. ಗುರುಗಳ ಸಿಟ್ಟು ನೆತ್ತಿಗೇರಿತು. 'ನಿನಗೆ ಸೇವೆ ಮಾಡುವುದು ಬೇಡವಾಗಿದ್ದರೆ ಬಿಟ್ಟುಬಿಡು. ನನಗಾಗಿ ನೀನು ವರ ಕೇಳಬೇಕಾಗಿಲ್ಲ. ವರದಿಂದ ಗುಣ ಹೊಂದಿದರೆ ಮತ್ತೆ ಅದು ಮೋಕ್ಷಕ್ಕೆ ಅಡ್ಡಿ.' ಎಂದು ಗುಡುಗಿದರು. ಸಂದೀಪಕ ಮರಳಿದ. ಪರಮೇಶ್ವರನಿಗೆ ಹೇಳಿದ. 'ನಮ್ಮ ಗುರುಗಳಿಗೆ ವರ ಬೇಕಾಗಿಲ್ಲ. ಅದಕ್ಕಾಗಿ ನನಗೂ ವರ ಬೇಡ.' ಪರಮೇಶ್ವರನಿಗೆ ಆಶ್ಚರ್ಯವೇ ಆಶ್ಚರ್ಯ! ಆನೇಕರು ತನ್ನ ವರ ಬೇಕೆಂದು ತಪಸ್ಸು

ಮಾಡುವಾಗ ಈತನಿಗೆ ತಾನಾಗಿಯೇ ವರಕೊಡಲು ಸಿದ್ಧನಾದರೆ ಬೇಡವೆನ್ನುತ್ತಿದ್ದಾನೆ!

ಕೈಲಾಸಕ್ಕೆ ಮರಳಿದ ಶಿವನು ದೇವತೆಗಳ ಸಭೆಯನ್ನು ಕರೆದ. ಸಭೆಯಲ್ಲಿ ಸಂದೀಪಕನ ಗುರುಭಕ್ತಿಯನ್ನು ಹೊಗಳಿದ್ದೇ ಹೊಗಳಿದ್ದು! ಅಂಥ ಗುರುಭಕ್ತ ಜಗತ್ತಿನಲ್ಲಿ ಬೇರೊಬ್ಬನಿಲ್ಲವೆಂದು ಹೇಳಿದ. ಶ್ರೀ ಹರಿಗೂ ಕುತೂಹಲ. ಸಂದೀಪಕನನ್ನು ಕಾಣುವ ಆತುರ. ಮತ್ತೊಂದು ದಿನ ಆತನೂ ಹಾಜರು ಸಂದೀಪಕನ ಎದುರಿಗೆ! ಕಾರ್ಯಮಗ್ನ ಸಂದೀಪಕನಿಗೆ ಶ್ರೀ ಹರಿಯಲ್ಲೂ ಅನಾಸಕ್ತಿ. ಆತ ಶ್ರೀ ಹರಿಯೆಡೆಗೆ ಹೊರಳಿಯೂ ನೋಡಲಿಲ್ಲ. ಆತನ ಗುರುಭಕ್ತಿಯನ್ನು ಕಂಡು ಶ್ರೀ ಹರಿಗೂ ರೋಮಾಂಚನ. ತಾನಾಗಿಯೆ ಮಾತನಾಡಿಸಿದ. ಗುರು ಭಕ್ತರು ತನಗೆ ಪ್ರಿಯರೆಂದ. ವರ ಬೇಡಲು ಕೇಳಿದ. ಸಂದೀಪಕ ಸ್ವಲ್ಪ ಖಾರವಾಗಿಯೇ ಹೇಳಿದ. "ಸಾವಿರಾರು ವರ್ಷಗಳಿಂದ ತಪಸ್ಸು ಮಾಡುತ್ತಿದ್ದಾರೆ ಋಷಿ ಮುನಿಗಳು. ಅವರಿಗೆ ಕೊಡು ನಿನ್ನ ವರಗಳನ್ನು. ನನಗೆ ನಿನ್ನ ವರಗಳ ಆವಶ್ಯಕತೆಯೆ." ಶ್ರೀ ಹರಿಗೆ ಹರ್ಷದಿಂದ ಹೃದಯ ಬಿರಿಯುವಂತಾಯಿತು; ಹೇಳಿದ. 'ನಿನಗೆ ವರ ಕೊಟ್ಟಲ್ಲದೆ ನನಗೆ ತೃಪ್ತಿಯಿಲ್ಲ. ನನ್ನ ಸಂತೋಷಕ್ಕಾದರೂ ವರ ಕೇಳು.' "ನಿನಗೆ ಅಷ್ಟು ಆತುರತೆ ಇದ್ದರೆ ನನ್ನಲ್ಲಿ ಗುರುಭಕ್ತಿ ಇನ್ನೂ ಹೆಚ್ಚಾಗುವಂತೆ ಅನುಗ್ರಹಿಸು. ಇದಕ್ಕಿಂತ ಹೆಚ್ಚಿನ ವರ ನನಗೆ ಬೇಕಿಲ್ಲ." ವರವಿತ್ತು ಮರಳಿದ ಶ್ರೀ ಹರಿ; ಗುರುಗಳೆಡೆಗೆ ತೆರಳಿದ ಸಂದೀಪಕ.

ಆಶ್ಚರ್ಯ! ಗುರುಗಳು ರೋಗ ಮುಕ್ತರಾಗಿದ್ದಾರೆ ಅವರ ಮೈ ಕಾಂತಿ ಸುವರ್ಣದಂತೆ ಬೆಳಗುತ್ತಲಿದೆ. ಸಂದೀಪಕನು ಬಾಗಿಲಿಗೆ ಬರುತ್ತಲೂ ಗುರುಗಳೇ ಎದ್ದು ಬಂದು ಆತನನ್ನು ಬಿಗಿದಪ್ಪಿಕೊಂಡರು. ಅವರ ಕಣ್ಣಿನಿಂದ ಆನಂದಾಶ್ರುಗಳು ಉದುರಲಾರಂಭಿಸಿದವು. ಸಂದೀಪಕನು ಗುರುಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ. ಚೊಕ್ಕ ಚಿನ್ನದಂತೆ ಆತನ ಮುಖ ಮಂಡಲವು ಹೊಳೆಯುತ್ತಿತ್ತು. ಗುರುಗಳು ಆತನಿಗೆ ಅಷ್ಟೈಶ್ವರ್ಯವನ್ನೂ ದಯಪಾಲಿಸಿದರು. 'ನಿನ್ನನ್ನು ನೆನೆದವರಿಗೂ ದಾರಿದ್ರ್ಯ ದುಃಖವಿಲ್ಲ' ಎಂದು ಹರಸಿ ಬೀಳ್ಕೊಟ್ಟರು. —

ಭಗವತ್ಸೇವೆಗೊಂದು ಸದವಕಾಶ

ಭಕ್ತ ಮಹಾಶಯರೇ,

- ಸುಕ್ಷೇತ್ರ ಸಿದ್ಧಗಂಗೆಯ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ನಿತ್ಯ ರುದ್ರಾಭಿಷೇಕೋತ್ಸವ ಸೇವಾ ವ್ಯವಸ್ಥೆಯಲ್ಲಿ ಭಾಗಿಗಳಾಗಿ ಶ್ರೀ ಸ್ವಾಮಿಯ ಕೃಪಾವಿಶೇಷಕ್ಕೆ ಪಾತ್ರರಾಗಿರಿ.
- ಒಮ್ಮೆ ಕೇವಲ 351 ರೂಗಳನ್ನು ಸಲ್ಲಿಸಿ ಪ್ರತಿವರ್ಷ ನಿಯಮಿತ ದಿನದಂದು ರುದ್ರಾಭಿಷೇಕವನ್ನು ತಮ್ಮ ಹೆಸರಿನಲ್ಲಿ ವಂಶಪಾರಂಪರ್ಯವಾಗಿ ನಡೆಸುವಂತೆ ವ್ಯವಸ್ಥೆಗೊಳಿಸಿ ಪುಣ್ಯಭಾಜನರಾಗಿರಿ
- ಪೂಜಾ ಸಮಯದಲ್ಲಿ ಸೇವಾಕರ್ತರು ಅನಿವಾರ್ಯ ಕಾರಣದಿಂದ ಶ್ರೀ ಕ್ಷೇತ್ರಕ್ಕೆ ಬರಲಾಗದಿದ್ದಲ್ಲಿ ಪ್ರಸಾದವನ್ನು ಅವರ ಮನೆಗೇ ಕಳುಹಿಸಿಕೊಡುವ ವ್ಯವಸ್ಥೆ ಮಾಡಲಾಗುವುದು.
- ಕಂತಿನ ಮೂಲಕವೂ ಹಣ ಸಂದಾಯ ಮಾಡಲು ಅವಕಾಶವಿದೆ. ಇನ್ನೂ ಹೆಚ್ಚಿನ ವಿವರಗಳಿಗೆ ಬರೆಯಿರಿ.

ವ್ಯವಸ್ಥಾಪಕರು
ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ದೇವಸ್ಥಾನದ ನಿತ್ಯ ರುದ್ರಾಭಿಷೇಕ ಸಮಿತಿ
ಶ್ರೀ ಸಿದ್ಧಗಂಗಾ ಕ್ಷೇತ್ರ–572131
ತುಮಕೂರು ಜಿಲ್ಲೆ



ಕಾ ವ್ಯ ವಾ ಹಿ ನಿ

ನಮನ ನಿನಗೆ!

ಇದೊ ತಾಯಿ ನಮನ ನಿನಗೆ
ಇದೊ ನನ್ನ ನಮನವು ॥
ಹಿಮಗಿರಿಯ ಮುಡಿಯ ವೈಭವವು
ಹೊರಹೊಮ್ಮಿತ್ತದು ಎಲ್ಲೆಡೆಗು;
ಸಸ್ಯ ಸಂಪದಕೆ ನಿಧಿ ಆ ನದಿಗಳು,
ಗಂಗೆ ಯಮುನೆಯರ ಸಿರಿ ಏನು !

ಹಿರಿದೇಗುಲಗಳ ದೇಶವು ಭಾರತ,
ಧರ್ಮಗಳೆಲ್ಲಕೆ ನೆಲೆವೀಡು;
ಸಹನ ಶೀಲತೆಯ ಮಾತೆಯೇ ನಿನಗೆ
ಸಾಧಿಸಿದಿಹುದದು ಅನವರತ!

ಸಹ್ಯ ವಿಂಧ್ಯಗಿರಿ ಮೈಸಿರಿ, ನೋಡು
ಖನಿಜ ಲೋಹಗಳಿಗಾಗರವು;
ದೇಶೋದ್ಧಾರಕ ಜನ ಸುಕ್ಷೇತ್ರವು
ಬಣ್ಣಿಸಲಸದಳವಿದು ಅಲ್ಲಿ ?

ಇದೊ ತಾಯಿ ನಮನ ನಿನಗೆ
ಇದೊ ನನ್ನ ನಮನವು

ಬಂದಿದೆ ಹೊಸ ಯುಗ!

ಹೊಸ ಯುಗ ಬಂದಿದೆ, ಹೊಸ ಯುಗ ಬಂದಿದೆ
ಹೊಸ ಯುಗ ಬಂದಿದೆ ನಮಗಿಂದು;
ಹಿಂದಿನ ಅಸ್ತವ್ಯಸ್ತತೆ ನಶಿಸಿ
ಬಂದಿದೆ ಹೊಸ ಯುಗ, ಇದೊ ನೋಡು

ಶಿಸ್ತು ಸಂಯಮವು ದಿನ ದಿನ ಮಾಳು
ದುಡಿಯುವ ಚಟ ಬೇರೂರಿದೆ ನಮ್ಮಲ್ಲಿ;
ಹೆಜ್ಜೆ ಹೆಜ್ಜೆಗಾವರಿಸಿದೆ ಆತುರ
ಬೇಸರ ಆಸರ ಬಲುದೂರ!

ಉನ್ಮಾದವು ನೆಲಸಿದೆ ಹಳ್ಳಿಯಲಿ,
ಜೀತ ಪದ್ಧತಿಯು ಕನಸಾಯ್ತು;
ಕಪ್ಪು ಹಣಕೆ ಅಳಿಗಾಲವು ನೋಡಿದೊ
ಸ್ವಾರ್ಥಕೆ ಮೋಸಕೆ ತಿಳಿಯೆಳೆದೊ !

ಹೊಸ ಯುಗ ಬಂದಿದೆ, ಹೊಸೆ ಯುಗ ಬಂದಿದೆ
ಹೊಸ ಯುಗ ಬಂದಿದೆ ನಮಗಿಂದು;
ಹಿಂದಿನ ಅಸ್ತವ್ಯಸ್ತತೆ ನಶಿಸಿ
ಬಂದಿದೆ ಹೊಸ ಯುಗ, ಇದೊ ನೋಡು!

—ಎನ್. ಎಸ್. ಗದಗಕರ

ಅಪಮೃತ್ಯು

—ಈಶ್ವರಚಂದ್ರ

ಮೃತ್ಯುವಿನಿಂದ ಯಾರಿಗೂ ವಿನಾಯಿತಿ ಇಲ್ಲ. ಬದುಕಿನ ಒಂದು ಅರ್ಥಪೂರ್ಣ ಕೊನೆಯೆಂದರೆ ಮೃತ್ಯು ಧೀರರು ತಮ್ಮ ಜೀವನದಲ್ಲಿ ಒಮ್ಮೆ ಮಾತ್ರ ಸಾಯುತ್ತಾರೆ; ಅಂಜುಬುರುಕರು ಅನೇಕಸಲ ಸಾಯುತ್ತಾರೆ. ಅಂತೂ ಸಾಯುವುದು ಯಾರಿಗೂ ತಪ್ಪಿದ್ದಲ್ಲ. ಅದಕ್ಕೆ ತಕರಾರಿಲ್ಲ. ಬದುಕಿರುವವರೆಗೆ ಬಾಳನ್ನು ಸಾರ್ಥಕವಾಗಿ ನಡೆಸಿ, ಕರೆ ಬಂದಾಗ 'ಓ'ಗೊಟ್ಟರಾಯಿತು. ಆದರೆ ನಮ್ಮ ತಕರಾರು ಅಪಮೃತ್ಯುವಿನ ಬಗೆಗೆ. ಅಪಮೃತ್ಯು ಎಂದರೇನು ? ಇದಕ್ಕಿರುವ ಇನ್ನೊಂದು ಹೆಸರು ಗಮನಿಸಿ : ಅಕಾಲ ಮರಣ. ಅಂದರೆ ಸಕಾಲ ಮರಣವಲ್ಲದ್ದು ಅಪಮೃತ್ಯು. ಸಕಾಲ ಮರಣ ಎಂದರೆ ವಯಸ್ಸು ತುಂಬಿ, ತುಂಬು ಬಾಳನ್ನು ಬಾಳಿ, ಜೀವನದ ಎಲ್ಲ ಸುಖ ಸಂತೋಷಗಳನ್ನು ಅನುಭವಿಸಿದ ನಂತರ ಬರುವ ಮರಣ. ಆದರೆ ಮನುಷ್ಯನಿಗೆ ಆಸೆ ಅತಿ. ಆದುದರಿಂದ ಸಕಾಲ ಮರಣದ ಮಿತಿಯನ್ನು ಇಂತಿಷ್ಟೇ ಎಂದು ನಿರ್ಧರಿಸಲಾಗುವುದಿಲ್ಲ, ಮೊದಲು ಮಗನ ಮದುವೆ ಆಗಲಿ ಎಂಬ ಆಸೆ. ಅನಂತರ ಮೊಮ್ಮಗನನ್ನು ಎತ್ತಿ ಆಡಿಸಬೇಕೆಂಬ ಆಸೆ ಅನಂತರ ಅವನ ಆಟಪಾಠಗಳನ್ನು ನೋಡುವ ಆಸೆ. ಇದೂ ಆದ ಮೇಲೆ ಮೊಮ್ಮಗನ ಮದುವೆ ನೋಡುವ ಆಸೆ. ಇದನ್ನು ಕುರಿತು ಒಂದು ಕಥೆಯೇ ಇದೆಯಲ್ಲ : ಒಬ್ಬ ಅವಿವಾಹಿತ ತರುಣನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ದೇವರು. ಏನು ವರ ಬೇಕೆಂದು ಕೇಳಿದ. ಅದಕ್ಕೆ ಅವನು ಒಂದು ಕ್ಷಣ ಯೋಚಿಸಿ, ನನ್ನ ಮೊಮ್ಮಗ ರಾಜನಾಗಿ ಆನೆಯ ಅಂಬಾರಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ಹೋಗುವುದನ್ನು ನಾನು ನೋಡಿ ಸಂತೋಷಪಡುವಂತೆ ಅನುಗ್ರಹಿಸು ಎಂದು ಬೇಡಿದ. ಇಲ್ಲಿ ಆಸೆಗಳ ಸಂದೋಹವನ್ನೇ ಕಾಣಬಹುದು. ಆದುದರಿಂದ 60-70 ವರ್ಷ ತುಂಬಿದ ಮೇಲೆ ಬರುವ ಮರಣವನ್ನು ಸಹಜ ಮರಣವೆನ್ನಬಹುದು. ಆದರೆ ಚಿಕ್ಕವಯಸ್ಸಿನಲ್ಲೇ ಅಪಘಾತಗಳಿಗೆ, ಆಕಸ್ಮಿಕಗಳಿಗೆ, ಮರಣಾಂತಿಕ ರೋಗಗಳಿಗೆ ತುತ್ತಾಗಿ ಸಾಯುವುದು ಅಕಾಲ ಮರಣ ಅಥವಾ ಅಪಮೃತ್ಯು.

ಅಲ್ಪ ಪ್ರಮಾಣದ ಅಜಾಗರೂಕತೆ
ಅಪಮೃತ್ಯುವಿಗೆ ಆಹ್ವಾನದಂತೆ

ಯಾರಾದರೂ ಸತ್ತ ಸುದ್ದಿ ಕೇಳಿದರೆ ಸಾಮಾನ್ಯವಾಗಿ ಮೃತರಿಗೆ ಎಷ್ಟು ವಯಸ್ಸಾಗಿತ್ತೆಂದು ವಿಚಾರಿಸುವುದು ರೂಢಿ. ಸತ್ತವರು ಚಿಕ್ಕವಯಸ್ಸಿನವರಾಗಿದ್ದರೆ ಪಾಪ ಇನ್ನೂ ಸಾಯುವ ವಯಸ್ಸಲ್ಲ ಎಂದು ಮರುಕ' ತೋರುತ್ತಾರೆ.

ವಯಸ್ಸು ತುಂಬಿದ ಮೇಲೆ ಸಾಯುವುದಕ್ಕಿಂತ ಚಿಕ್ಕವಯಸ್ಸಿನಲ್ಲಿ ಸತ್ತರೆ, ವೈಯಕ್ತಿಕವಾಗಿ ಹಾಗೂ ರಾಷ್ಟ್ರಕ್ಕೆ ನಷ್ಟ ಹೆಚ್ಚು. ಹಣ್ಣೆಲೆ ಉದುರುವುದು ಸಹಜ. ಚಿಗುರೆಲೆ ಉದುರಿದರೆ ಅದು ಅಕಾಲ ಮರಣ. ಇಂಥ ಅಕಾಲ ಮರಣಗಳು ಸಾಮಾನ್ಯವಾಗಿ ಅಪಮೃತ್ಯುಗಳಿಂದ ಸಂಭವಿಸುತ್ತವೆ. ರಸ್ತೆ ಅಪಘಾತಗಳು, ಮನೆಗಳ ಕುಸಿತ, ಬೆಂಕಿ ಅನಾಹುತ, ಪ್ರವಾಹ, ಗಣಿಕುಸಿತ, ವಿಮಾನ-ರೈಲು ಅಪಘಾತಗಳಿಂದ ಆಗುವ ಅಪಮೃತ್ಯುಗಳ ಸಂಖ್ಯೆ ಅಧಿಕವಾಗಿದೆ. ಬೆಂಗಳೂರು ನಗರದ

ಉದಾಹರಣೆ ತೆಗೆದುಕೊಂಡರೆ ರಸ್ತೆ ಅಪಘಾತಗಳಲ್ಲಿ 1976ರಲ್ಲಿ ಜನವರಿಯಿಂದ ನವೆಂಬರ್ ಕೊನೆಯವರೆಗೆ 173 ಜನ ಸತ್ತು 2126 ಜನ ಗಾಯಗೊಂಡಿದ್ದಾರೆ. ಅಂದರೆ ಸರಾಸರಿ ದಿನಕ್ಕೆ 7 ಜನ ಗಾಯಗೊಂಡು, 2 ದಿನಕ್ಕೆ ಒಬ್ಬರು ಸತ್ತಂತಾಯಿತು.

ಉದ್ಯೋಗ, ವಿದ್ಯಾಭ್ಯಾಸ, ವ್ಯಾಪಾರ, ಮನರಂಜನೆಗೆಂದು ಮನೆಯಿಂದ ಹೊರಗೆ ಹೋದವರು ಕ್ಷೇಮವಾಗಿ ಮನೆಗೆ ಹಿಂತಿರುಗುತ್ತಾರೋ ಇಲ್ಲವೋ ಎಂದು ಮನೆಯ ಹೆಂಗಸರು ತಳ್ಳಂಕದಿಂದ ಕಾದಿರಬೇಕಾದ ಸ್ಥಿತಿ ನಮ್ಮಲ್ಲಿ ಇರುವುದು ತುಂಬ ಕಳವಳಕಾರಿ. ಎಳೆಯ ಕಂದಮ್ಮಗಳನ್ನು ಶಾಲೆಗೆ ಕಳುಹಿಸುವ ತಾಯಂದಿರ ಹೃದಯ ಹೇಗಿದ್ದೀತೆಂದು ಊಹಿಸುವುದಕ್ಕೂ ಹೆದರಿಕೆಯಾಗುತ್ತದೆ. ಇಂಥ ಪರಿಸ್ಥಿತಿ ನಿವಾರಣೆಯಾಗದಿದ್ದರೆ ನಾವು ಎಷ್ಟೇ ಪ್ರಗತಿ ಸಾಧಿಸಿದರೂ ನಿರರ್ಥಕ.

ಈ ಸಮಸ್ಯೆ, ವೈಜ್ಞಾನಿಕವಾಗಿ ಪ್ರಗತಿ ಸಾಧಿಸಿರುವ ವಿದೇಶಗಳಲ್ಲೂ ಇಲ್ಲವೆಂದಲ್ಲ. ಅಮೆರಿಕದಲ್ಲಿ ವಾರದ ರಜಾ ದಿನಗಳಲ್ಲಿ ಮತ್ತು ಕ್ರಿಸ್ ಮಸ್ ಹಾಗೂ ವರ್ಷಾರಂಭದ ಆಚರಣೆಯ ಸಂದರ್ಭದಲ್ಲಿ ರಸ್ತೆಗಳಲ್ಲಿ ವಾಹನಗಳ ಕಿಕ್ಕಿರಿತದಿಂದ ಸಹಸ್ರಾರು ಮಂದಿ ಅಸುನೀಗುತ್ತಾರೆ. ನೆರೆಯವರು ಸಂತೋಷದಿಂದ ನಲಿದಾಡುತ್ತಿರುವಾಗ ಮೃತರ ಮನೆಯವರು ದುಃಖದಿಂದ ಗೋಳಿಡುವುದು ದಾರುಣ ಪ್ರಸಂಗ. ನಮ್ಮಲ್ಲಿ ದೀಪಾವಳಿಯ ಸಂದರ್ಭದಲ್ಲಿ ಆಗುವ ಬೆಂಕಿ ಅಪಘಾತಗಳೂ ಈ ಮಾದರಿಯವೇ.

ಮೊನ್ನೆ ಸ್ಕೂಟರ್ ಅಪಘಾತದಲ್ಲಿ ಪೆಟ್ಟುತಿಂದ ನನ್ನ ಪರಿಚಿತರೊಬ್ಬರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದೆ.

"ರಸ್ತೇಲಿ ಹೋಗಬೇಕಾದ್ರೆ ನೀವು ತುಂಬಾ ಹುಷಾರಿ. ಅದ್ರೂ ಈ ಆಕ್ಸಿಡೆಂಟ್ ಹೇಗಾಯ್ತು ?" ಎಂದು ಅವರನ್ನು ಕೇಳಿದೆ.

"ನಾನೇನೋ ಹುಷಾರಾಗೆ ಸ್ಕೂಟರ್ ಬಿಡುತ್ತಿದ್ದೆ. ಆದರೆ ಇನ್ನೊಬ್ಬ ಬಂದು ನನಗೆ ಢಿಕ್ಕಿ ಹೊಡೆದ" ಎಂದು ಅವರು ವಿಷಾದ ತುಂಬಿದ ನಗೆ ಬೀರಿದರು.

ರಸ್ತೆ ಸಾರ್ವಜನಿಕರ ಸ್ವತ್ತು. ಅದು ಸ್ವಂತದ್ದೆನ್ನುವಂತೆ ವಾಹನಗಳನ್ನು ಬಿಡುತ್ತಿದ್ದರೆ ಇತರರಿಗೂ ಅಪಾಯ, ನಮಗೂ ಅಪಾಯ. ರಸ್ತೆಯಲ್ಲಿ ನಾವೆಷ್ಟೆ ಹುಷಾರಾಗಿದ್ದರೆ ಸಾಲದು. ನಮ್ಮ ನೆರೆಯವರೂ ಎಚ್ಚರದಿಂದಿರಬೇಕು.

ಊರಿಂದೂರಿಗೆ ಪ್ರಯಾಣಿಕರನ್ನು ಸಾಗಿಸುವ ಬಸ್ಸುಗಳು ಅಪಘಾತಕ್ಕೀಡಾದರೆ ಆಗುವ ಸಾವು ನೋವು ಅಪಾರ. ಚಾಲಕ ಮದ್ಯಪಾನ ಮಾಡಿದ್ದರೆ 'ಲಿಲ್ಲಿಲ್ಲಿಲ್ಲಿ ರಸ್ತೆ ಏನಿದ್ ಅವ್ವೆವಸ್ತೆ' ಎನ್ನಿಸುವುದು ಸಹಜ. ಚಾಲಕನ ಅಜಾಗರೂಕತೆ, ನಿದ್ದೆಯ ಕೊರತೆ, ಸಂಸಾರದ ತೊಂದರೆಗಳಿಂದ ಮನಸ್ಸು ಹದಗೆಡುವುದು, ಮುಂದಿನ ವಾಹನಗಳನ್ನು ಹಿಂದೆಹಾಕಬೇಕೆನ್ನುವ ಸ್ಪರ್ಧಾ ಮನೋಭಾವ, ಅತಿ ವೇಗವಾಗಿ ವಾಹನಗಳನ್ನು ಓಡಿಸುವ ಚಪಲ, ಖೋಟಾ ರಹದಾರಿ (ಲೈಸನ್ಸ್) ಉಳ್ಳ ಚಾಲಕ, ಕೆಟ್ಟ ರಸ್ತೆಗಳು, ದುಃಸ್ಥಿತಿಯಲ್ಲಿರುವ ವಾಹನಗಳು ಅಪಘಾತಕ್ಕೆ ಕಾರಣ.

ಹೆಚ್ಚಿನ ಪಾಲು ಆಕಸ್ಮಿಕಗಳಿಗೆ, ಅಪಘಾತಗಳಿಗೆ ಮನುಷ್ಯರ ಅಜಾಗರೂಕತೆಯೇ ಮುಖ್ಯ ಕಾರಣವಾಗಿರುತ್ತದೆ. ಎಚ್ಚರ ತಪ್ಪಿದಾಗ ಅಪಘಾತ. ಇದು ವಿಧಿವಿಲಾಸ ಎಂದು ನಾವು ಕೈ ಚೆಲ್ಲಿ ಕೂಡುವಂತಿಲ್ಲ. ಅಪಮೃತ್ಯುಗಳನ್ನು ತಡೆಯಲು ನಮ್ಮ ಪ್ರಯತ್ನ ನಡೆಯುತ್ತಲೇ ಇರಬೇಕಾಗುತ್ತದೆ. —

ಲೋಕಪ್ರಸಿದ್ಧಿಯಾದ ಉತ್ತಮವಾದ



ಬಸವೇಶ್ವರ ಬ್ರಾಂಡ್

ಸೀಗೆಪುಡಿ ಉಪಯೋಗಿಸಿ

ಶ್ರೀ ಚನ್ನಬಸವೇಶ್ವರ ಸೋಪ್‌ನಟ್ ವರ್ಕ್ಸ್,

ತುಮಕೂರು.

ಶಕ್ತಿ-ಉಗಮ ಮತ್ತು ವಿಕಾಸ

—ಡಿ. ಆರ್. ಬಳೂರಗಿ ಎಂ. ಎಸ್‌ಸಿ.,

ಹೊಸ ಹೊಸ ಶಕ್ತಿ ಮೂಲಗಳ ಅನ್ವೇಷಣೆಯೇ ಮಾನವನ ದಿನ ನಿತ್ಯದ ಹೋರಾಟವೆನಿಸಿದೆ. ಅದಕ್ಕೆ ಪೂರಕವೆನಿಸುವಂತೆ ದಿನದಿಂದ ದಿನಕ್ಕೆ ನೈಸರ್ಗಿಕ ಶಕ್ತಿಸಂಪನ್ಮೂಲಗಳ ಬಳಕೆ ಹೆಚ್ಚುತ್ತಲಿದೆ.

ಶಕ್ತಿಯ ಇತಿಹಾಸ ಬಹು ಪುರಾತನವಾದದ್ದು. ನಿಸರ್ಗದಲ್ಲಿ ವ್ಯರ್ಥವಾಗಿ ಹರಿದು ಹೋಗುತ್ತಿರುವ ಶಕ್ತಿಯನ್ನು ತನ್ನ ಅನುಕೂಲತೆಗಾಗಿ ಪರಿವರ್ತಿಸಿಕೊಳ್ಳಲು ಪ್ರಾಚೀನ ಕಾಲದಿಂದಲೂ ಮಾನವ ಯತ್ನಿಸುತ್ತ ಬಂದಿದ್ದಾನೆ. ಆದಿ ಮಾನವ ಮತ್ತು ಪ್ರಾಣಿಗಳು ಬದಲಾಗುತ್ತಿರುವ ಪರಿಸರವು ಒಡ್ಡಿದ ನಿರ್ಬಂಧಗಳಿಗೆ ಹೊಂದಿಕೊಂಡರೆ, ಮಾನವನ ಬೌದ್ಧಿಕ ವಿಕಾಸವಾಗುತ್ತ ಹೋದಂತೆ, ಆತ ಪರಿಸ್ಥಿತಿಯನ್ನೇ ತನ್ನ ಅನುಕೂಲಕ್ಕೆ ಬದಲಾಯಿಸುವ ಸಾಮರ್ಥ್ಯ ಪಡೆದ, ಈ ದೆಸೆಯಲ್ಲಿ ಮಾನವನ ಪ್ರಥಮ ದಿಟ್ಟ ಹೆಜ್ಜೆಯೆಂದರೆ ಮೈಯನ್ನು ಬೆಚ್ಚಗಿಟ್ಟುಕೊಳ್ಳಲು ಬೆಂಕಿಯನ್ನು ಉಪಯೋಗಿಸಿದ್ದು, ಮಾನವನ ಬದುಕಿಗೆ ಸುಖಜೀವನಕ್ಕೆ ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಶಕ್ತಿಯೇ ಮೂಲ.

ಶಕ್ತಿಯ ಉಪಯೋಗವು ಮುಖ್ಯವಾಗಿ ಎರಡು ಸಂಗತಿಗಳನ್ನು ಅವಲಂಬಿಸಿರುತ್ತದೆ. ಒಂದು ಶಕ್ತಿಯ ಮೂಲಗಳ ಲಭ್ಯತೆ, ಇನ್ನೊಂದು ಅವುಗಳನ್ನು ಉಪಯುಕ್ತವಾಗುವ ರೀತಿಯಲ್ಲಿ ಪರಿವರ್ತಿಸಿಕೊಳ್ಳ ಬಹುದಾದ ತಾಂತ್ರಿಕ ಕೌಶಲ್ಯ. ಶಕ್ತಿಯ ಮೂಲಗಳು ಎಂದಿನಿಂದಲೂ ನಮಗೆ ಲಭ್ಯವಾಗಿವೆ. ಆದರೆ ಅವುಗಳನ್ನು ನಮಗೆ ಅನುಕೂಲವಾದ ರೀತಿಯಲ್ಲಿ ಪರಿವರ್ತಿಸಬಲ್ಲ ಯಂತ್ರಗಳ ತಯಾರಿಕೆ ಇತ್ತೀಚಿನದ್ದು. ಮೊದ ಮೊದಲು ಮಾನವನು ಕುದುರೆ, ಎತ್ತು ಮುಂತಾದ ಪ್ರಾಣಿಗಳನ್ನು ತನ್ನ ಶಕ್ತಿಯ ಆಕರಗಳನ್ನಾಗಿ ಉಪಯೋಗಿಸಿದ. ಅವು ಅಷ್ಟು ಮಹತ್ವದ ಆಕರಗಳಾಗಿದ್ದರೂ ಅವುಗಳಿಗೆ ಒದಗಿಸಲಾದ ಆಹಾರವು ಮನುಷ್ಯನ ಆಹಾರದಲ್ಲಿ ಕೊರತೆಯನ್ನುಂಟುಮಾಡಲಿಲ್ಲವೆಂಬುದೇ ಒಂದು ದೊಡ್ಡ ಸಮಾಧಾನ. ಆರಂಭದಲ್ಲಿ ಮನುಷ್ಯ ತನ್ನ ಸಾಮರ್ಥ್ಯವನ್ನು ಬಳಸಿದ್ದು ಕೃಷಿ ಕಾರ್ಯಗಳಿಗಾಗಿ.

ನೀರಾವರಿ ಕಾರ್ಯಕ್ಕಾಗಿ ಬೇಕಾದ ಶಕ್ತಿಯನ್ನು ನಿಸರ್ಗದತ್ತ ಮೂಲಗಳಿಂದ ದೊರಕಿಸಿಕೊಳ್ಳುವ ವಿಧಾನ ಬಹಳ ಹಿಂದೆಯೇ ಗೊತ್ತಿತ್ತು. 0.3 ಕಿಲೋವಾಟ್ ಸಾಮರ್ಥ್ಯದ ಕ್ಷಿತಿಜ ಸಮಾಂತರ ಜಲ ಚಕ್ರವನ್ನು ಕ್ರಿ. ಪೂರ್ವ ಒಂದನೆಯ ಶತಮಾನದಲ್ಲಿಯೇ ಉಪಯೋಗಿಸಲಾಗಿತ್ತೆಂಬುದು ಐತಿಹಾಸಿಕ ಮೂಲಗಳಿಂದ ಗೊತ್ತಾಗಿದೆ. ಕ್ರಿ. ಶ. ನಾಲ್ಕನೆಯ ಶತಮಾನದ ಹೊತ್ತಿಗೆ ಸುಮಾರು ಎ ರ ಡು ಕಿಲೋವಾಟ್ ಸಾಮರ್ಥ್ಯದ ಭೂಲಂಬ ಜಲಚಕ್ರದ ನಿರ್ಮಾಣ ಸಾಧ್ಯವಾಯಿತು ಈ ಚಕ್ರಗಳನ್ನು ಧಾನ್ಯಗಳನ್ನು ಬೀಸಲು ಮತ್ತು ಇದೇ ಬಗೆಯ ಯಾಂತ್ರಿಕ ಕಾರ್ಯಗಳಿಗಾಗಿ ಉಪಯೋಗಿಸಲಾಗುತ್ತಿತ್ತು. 16ನೇ ಶತಮಾನದ ಹೊತ್ತಿಗೆ ಜಲಚಕ್ರದ ತಂತ್ರದಲ್ಲಿ ಎಷ್ಟು ಸುಧಾರಣೆಯಾಗಿತ್ತೆಂದರೆ, ಅದು ಪ್ರಧಾನ ಚಾಲಕ ಶಕ್ತಿಯಾಗಿ ಪರಿಣಮಿಸಿತ್ತು. ಮತ್ತು ಪಶ್ಚಿಮ ಯೂರೋಪಿನ ಔದ್ಯೋಗೀಕರಣಕ್ಕೆ ಅಡಿಪಾಯ ಹಾಕಿತ್ತು. 17ನೆಯ ಶತಮಾನದ ಹೊತ್ತಿಗೆ ಅದರ ಸಾಮರ್ಥ್ಯ ಒಂದು ಗಣನೀಯ ಮಟ್ಟವನ್ನು ತಲುಪಿತ್ತು.

ಗಾಳಿಯಂತ್ರವು (wind-mill) ಪಶ್ಚಿಮ ಯೂರೋಪಿನಲ್ಲಿ 12ನೆಯ ಶತಮಾನದಲ್ಲಿ ಮೊಟ್ಟ ಮೊದಲಿಗೆ ಕಾಣಿಸಿಕೊಂಡಿತು. ಅದನ್ನು ಧಾನ್ಯಗಳಿಂದ ಹಿಟ್ಟು ತಯಾರಿಸಲು ಗಣಿಗಳಿಂದ ಖನಿಜಗಳನ್ನು ಹೊರ

ತೆಗೆಯಲು ಮತ್ತು ನೀರೆತ್ತಲು ಉಪಯೋಗಿಸಲಾಗುತ್ತಿತ್ತು. 12 ಕಿಲೋವಾಟ್ ಸಾಮರ್ಥ್ಯದ ವರೆಗಿನ ವಿವಿಧ ಬಗೆಯ ಗಾಳಿಯಂತ್ರಗಳು ಆಗ ಬಳಕೆಯಲ್ಲಿದ್ದವು. ಗಾಳಿಯು ಯಾವಾಗಲೂ ಒಂದೇದಿಕ್ಕಿನಲ್ಲಿ ಬೀಸುವುದಿಲ್ಲ. ಅಲ್ಲದೆ ನಿರಂತರವಾಗಿಯೂ ಬೀಸುವುದಿಲ್ಲ ಆದ್ದರಿಂದ ಗಾಳಿಯಂತ್ರದ ಒಂದು ಮುಖ್ಯ ದೋಷವೆಂದರೆ ಅದು ನಿರಂತರ ಕಾರ್ಯಮಾಡಲಾರದು.

ಜಲಚಕ್ರ ಮತ್ತು ಗಾಳಿಯಂತ್ರಗಳಿಗಿಂತಲೂ ಸುಧಾರಿತ ಯಂತ್ರವೆಂದರೆ ಉಗಿಯಂತ್ರ. ಕ್ರಿ. ಶ ಒಂದನೆಯ ಶತಮಾನದಲ್ಲಿಯೇ ಅಲೆಕ್ಸಾಂಡ್ರಿಯಾದ ಹೀರೋ ಎಂಬಾತನು ಪ್ರಥಮ ಉಗಿ ಟರ್ಬೈನನ್ನು ತಯಾರಿಸಿ ತೋರಿಸಿದನು. ಆದರೆ ಇದು ಕೇವಲ ಆಟಿಕೆಯ ಸಾಮಾನಿನಂತೆ ಕೌತುಕದ ವಸ್ತುವಾಗಿತ್ತೇ ವಿನಃ ನಮ್ಮ ಉಪಯೋಗಕ್ಕೆ ಬೇಕಾಗುವಷ್ಟಿರಲಿಲ್ಲ. 17ನೆಯ ಶತಮಾನದವರೆಗೆ ಉಗಿಯ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಾಗಲಿಲ್ಲ. ಥಾಮಸ್ ಸೇವರಿ ಪ್ರಥಮ ಉಗಿ ಪಂಪನ್ನು ಸೃಷ್ಟಿಸಿದನು. ಬೆಣೆರಹಿತ ಈ ಯಂತ್ರವನ್ನು ನೀರೆತ್ತಲು ಉಪಯೋಗಿಸಲು ಸಾಧ್ಯವಾಯಿತು. 18ನೆಯ ಶತಮಾನದ ಆರಂಭದಲ್ಲಿ ಅನೇಕ ಕಿಲೋವಾಟ್ ಸಾಮರ್ಥ್ಯದ ಬೆಣೆಯನ್ನೊಳಗೊಂಡ ಉಗಿಯಂತ್ರವನ್ನು ಸೃಷ್ಟಿಸುವಲ್ಲಿ ತಂತ್ರಜ್ಞರು ಯಶಸ್ವಿಯಾದರು.

ಚಲನೆಯನ್ನು ಸಾಧಿಸಿಕೊಟ್ಟ ಯಂತ್ರಗಳಲ್ಲಿ ಪ್ರಥಮವಾದದ್ದೆಂದರೆ ಉ ಗಿ ಯ ಂ ತ್ರ ವೇ. ಆದರೆ ಔದ್ಯೋಗಿಕ ಕ್ರಾಂತಿಗೆ ಅಡಿಪಾಯ ಹಾಕಿದ ಯಂತ್ರಗಳೆಂದರೆ, ಜಲ ಚಕ್ರ ಮತ್ತು ಗಾಳಿಯಂತ್ರಗಳು. ಆದ್ದರಿಂದ ಔದ್ಯೋಗಿಕ ಕೇಂದ್ರಗಳು ಹಾಗೂ ಕಾರ್ಖಾನೆಗಳ ಸ್ಥಾಪನೆಯು ಈ ಶಕ್ತಿ ಮೂಲಗಳನ್ನವಲಂಬಿಸಿರುತ್ತಿತ್ತು. ಆದರೆ ಉಗಿಯಂತ್ರದ ಆವಿಷ್ಕಾರದ ನಂತರ ಔದ್ಯೋಗಿಕ ಅಭಿವೃದ್ಧಿಗೆ ಅಧಿಕ ಚಾಲನೆ ದೊರೆಯಿತು. ಆದರೆ ಆರಂಭದಲ್ಲಿ ಉಗಿಯಂತ್ರವನ್ನು ಜಲಚಕ್ರಕ್ಕೆ ಸಹಾಯಕ ಯಂತ್ರವನ್ನಾಗಿ ಉಪಯೋಗಿಸಲಾಗುತ್ತಿತ್ತು. ಅಂದರೆ ಉಗಿಯಂತ್ರದಿಂದ ನೀರನ್ನು ಮೇಲೆತ್ತಿ ಆ ನೀರನ್ನು ಜಲ ಚಕ್ರವನ್ನು ತಿರುಗಿಸಲು ಉಪಯೋಗಿಸಲಾಗುತ್ತಿತ್ತು. 19ನೇ ಶತಮಾನದ ಮಧ್ಯಕಾಲದಲ್ಲಿ ಉಗಿ ಯಂತ್ರವು ಪ್ರಧಾನ ಚಾಲಕ ಶಕ್ತಿಯಾಗಿ ಪರಿಣಮಿಸಿತು.

ಸಾಮಾಜಿಕ ಅಭಿವೃದ್ಧಿಗಾಗಿ ಅಧಿಕ ಸಾಮರ್ಥ್ಯದ ಯಂತ್ರಗಳ ರಚನೆ ವಿವಿಧ ಶಕ್ತಿಯ ಮೂಲಗಳ ಬಳಕೆ ಆರಂಭವಾದದ್ದು ಹದಿನೇಳನೆಯ ಶತಮಾನದಿಂದೀಚೆಗೆ ಶಕ್ತಿಯನ್ನು ಪರಿವರ್ತಿಸುವ ಉಪಕರಣಗಳು ಮೊದಲಿಗಿಂತ 10,000 ಪಟ್ಟು ಸಾಮರ್ಥ್ಯವನ್ನು ನೀಡುತ್ತಲಿವೆ ಇದರಲ್ಲಿ ಹೆಚ್ಚಿನ ಬೆಳವಣಿಗೆಯು ಕಳೆದ ಶತಮಾನದಲ್ಲಿ ನಡೆದರೂ ಈ ಶತಮಾನದ ಆದಿಯಲ್ಲಿ ಅದರ ಪ್ರಭಾವ ಎದ್ದು ಕಾಣುತ್ತದೆ. ಮಾನವ ಸಾಧಿಸಿದ ತಾಂತ್ರಿಕ ಕೌಶಲ್ಯದ ಕಾರಣದಿಂದ ಶಕ್ತಿಯನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸಲು ಸಾಧ್ಯವಾಯಿತು.

ಸದ್ಯ ಜಗತ್ತಿನ ಜನಸಂಖ್ಯೆ ವಿಪರೀತವಾಗಿ ಏರುತ್ತಿವೆ. ಈ ಬೆಳವಣಿಗೆಗೆ ಇದೇ ರೀತಿಯಾಗಿ ನಡೆದರೆ ಕೆಲವರ್ಷಗಳಲ್ಲಿ ಅಧಿಕ ಪ್ರಮಾಣದಲ್ಲಿ ಸಾವು ನೋವುಗಳುಂಟಾಗುವ ಸಂಭವವುಂಟು, ಅನಭಿವೃದ್ಧ ರಾಷ್ಟ್ರಗಳಂತೂ ಹೆಚ್ಚು ತೊಂದರೆ ಪಡುವ ಸಂಭವ ಹೆಚ್ಚಾಗಿದೆ. ಜೀವನ ಮಟ್ಟವನ್ನು ಕಾಯ್ದುಕೊಳ್ಳಲು ಈಗ-ವಿಶ್ವದಲ್ಲಿ ದೊರೆಯಬಹುದಾದ ಶಕ್ತಿಯನ್ನೆಲ್ಲ ಉಪಯೋಗಿಸಿಕೊಳ್ಳುವುದು, ಅವಶ್ಯಕವಾಗಿದೆ. ಅಲ್ಲದೆ ಕಳೆದ ಶತಮಾನದಲ್ಲಿ ಶಕ್ತಿಯ ಬಳಕೆ ವಿಪರೀತ ಹೆಚ್ಚಿದೆ. ಅಮೇರಿಕದ ಉದಾಹರಣೆಯೊಂದನ್ನೇ ಪರಿಗಣಿಸಿದರೆ, ಕಳೆದೊಂದು ಶತಮಾನದಲ್ಲಿ ಜನಸಂಖ್ಯೆ ಐದುಪಟ್ಟು ಹೆಚ್ಚಾಗಿದ್ದರೆ ಶಕ್ತಿಯ ಬಳಕೆ ಏಳುಪಟ್ಟು ಹೆಚ್ಚಿದೆ. ಅಂದರೆ ಶಕ್ತಿಯ ಬಳಕೆ ಮೊದಲಿಗಿಂತ ಸುಮಾರು ಇಮ್ಮಡಿಯಾದಂತಾಯಿತು. ಆದರೆ ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚಳದ ದರ ಹೆಚ್ಚಿ ಶಕ್ತಿಯ ಉತ್ಪನ್ನ ಕಡಿಮೆಯಾಗಿದೆ. 1850ರ ಸುಮಾರಿಗೆ ಶಕ್ತಿಯನ್ನು ಒದಗಿಸುವಲ್ಲಿ ಉರುವಲು ಕಟ್ಟಿಗೆಯ ಪ್ರಮುಖ ಪಾತ್ರ ವಹಿಸಿತ್ತು. 1910ರ ಸುಮಾರಿಗೆ ಬಳಸಲಾದ ಒಟ್ಟು ಶಕ್ತಿಯಲ್ಲಿ ಶೇಕಡಾ 75ರಷ್ಟು ಕಲ್ಲಿದ್ದಲನ್ನು ಉಪಯೋಗಿಸಿ ಪಡೆಯಲಾಯಿತು. ಮತ್ತು ಉರುವಲು ಕಟ್ಟಿಗೆಯ ಪ್ರಮಾಣ ಶೇಕಡಾ 10 ಕ್ಕಿಳಿಯಿತು. 1910 ರಿಂದ 1960ರ ವರೆಗಿನ 50 ವರ್ಷಗಳ ಅವಧಿಯಲ್ಲಿ ತೈಲ ಮತ್ತು ನೈಸರ್ಗಿಕ ಅನಿಲಗಳು ಕಲ್ಲಿದ್ದಲಿನ ಸ್ಥಾನಕ್ಕೆ ಬಂದವು ಈಗ ಅಣು ಶಕ್ತಿಯು ವಿಶ್ವದ ಶಕ್ತಿಯ ಪ್ರಮುಖ ಮೂಲವಾಗತೊಡಗಿದೆ.

(26ನೇ ಪುಟ ನೋಡಿ)

"ಸ್ವಕಾರ್ಯದಲ್ಲಿ ಸ್ವಾಮಿಕಾರ್ಯ"

- ಮುಪ್ಪಿನ ಮುಡುಪಿಗಾಗಿ ತಪ್ಪದೆ ಜೀವವಿಮೆ ಮಾಡಿ
- ನಂಬಿದವರ ಅವಲಂಬನೆ ಜೀವವಿಮೆಯ ಮೇಲೆ
- ಸೇವೆಯೇ ನಮ್ಮ ಧ್ಯೇಯ

'ಕಾಯಕವೇ ಕೈಲಾಸ' 'ದೇಶಸೇವೆಯೇ ಈಶಸೇವೆ'

ಎಂಬುದನ್ನು ಕೃತಿಯಲ್ಲಿ ನೋಡಬಹುದಾದ 'ಶ್ರೀ ಸಿದ್ಧಗಂಗಾ' ಮಠದ ಸರ್ವತೋಮುಖ ಅಭಿವೃದ್ಧಿಗಾಗಿ ನಿಮ್ಮ ಮತ್ತು ನಿಮ್ಮ ಬಂಧುಮಿತ್ರರು 'ಜೀವವಿಮೆ' ನಮ್ಮ ಮಠದ ಏಜೆಂಸಿಯ ಮೂಲಕ ಪಡೆದು ಶ್ರೀ ಕ್ಷೇತ್ರದ ಸೇವಾಕಾರ್ಯದಲ್ಲಿ ಪಾಲ್ಗೊಂಡು ಪುಣ್ಯಭಾಗಿಗಳಾಗಿರಿ.

ವಿವರಗಳಿಗೆ ವ್ಯವಹರಿಸಿ : ಕಾರ್ಯದರ್ಶಿ

ಹಳೆಯ ವಿದ್ಯಾರ್ಥಿ ಸಂಘ,
ಶ್ರೀ ಸಿದ್ಧಗಂಗಾ ಮಠ 572131,
ತುಮಕೂರು ಜಿಲ್ಲೆ

ರೈತಬಾಂಧವರೆ ಗಮನಿಸಿ

ಶ್ರೀ ಮರುಳ ಬಸವೇಶ್ವರಸ್ವಾಮಿ ಪ್ರಸನ್ನ

ಶ್ರೀ ಪ್ರಕಾಶ ಎಲೆಕ್ಟ್ರಿಕಲ್ಸ್

ಪ್ರೊ|| ನಂದೀಶಯ್ಯ ಎಲ್. ಇ. ಇ.

ಗ್ರಾ|| ಏ|| ಲೇ|| ಕಂಟ್ರಾಕ್ಟರ್ಸ್ ಮತ್ತು ಇಂಜಿನಿಯರ್ಸ್

ಡೀಲರ್ಸ್ : **ಟ್ಯಾಕ್ಸಿ ಮೋಟಾರು ಮತ್ತು ಕಂಟ್ರಾಕ್ಟರ್ಸ್**

ಗುಬ್ಬಿ ತಾಲ್ಲೂಕು, ಜೇಳೂರು, ತುಮಕೂರು ಜಿಲ್ಲೆ

ನಾವು ನಿಮಗೆ ಕಂತು ಸಾಲದ ರೂಪದಲ್ಲಿ ಬ್ಯಾಂಕುಗಳ ಮೂಲಕ ಪಂಪ್‌ಸೆಟ್‌ಗಳನ್ನು ನುರಿತ ಕೆಲಸಗಾರರಿಂದ ಮಾಡಿಸಿ ಸಕಾಲಕ್ಕೆ ಸರಿಯಾಗಿ ಸರ್ವೀಸ್ ಮಾಡಿಸಿ ಕೊಡುತ್ತೇವೆ.

"ನಿಮ್ಮ ಸೇವೇಯೇ ನಮ್ಮ ಗುರಿ"

'ಸಿದ್ಧಗಂಗಾ' ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 [ವಿಧಿ 8]

1]	ಪ್ರಕಟಣೆಯ ಸ್ಥಳ	—	ಶ್ರೀ ಸಿದ್ಧಗಂಗಾ ಮಠ
2]	ಪ್ರಕಟಣೆಯ ನಿಯತಕಾಲಿಕತೆ	—	ಮಾಸಪತ್ರಿಕೆ
3]	ಮುದ್ರಕರ ಹೆಸರು	—	ಶ್ರೀ ಶಿವಕುಮಾರ ಸ್ವಾಮಿಗಳು
	ಭಾರತದ ಪ್ರಜೆಯೇ ?	—	ಹೌದು
	ವಿಳಾಸ	—	ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ
4]	ಪ್ರಕಾಶಕರ ಹೆಸರು	—	ಹೆಚ್. ಬಿ. ಗಂಗಾಧರಯ್ಯ
	ಭಾರತದ ಪ್ರಜೆಯೇ ?	—	ಹೌದು
	ವಿಳಾಸ	—	ಶ್ರೀ ಸಿದ್ಧಗಂಗಾ ಮಠ ತುಮಕೂರು ಜಿಲ್ಲೆ
5]	ಸಂಪಾದಕರ ಹೆಸರು	—	ಚನ್ನಪ್ಪ ಎರೆಸೀಮೆ ಕೆ. ಜಿ. ರಂಗಯ್ಯ
	ಭಾರತದ ಪ್ರಜೆಯೇ ?	—	ಹೌದು
	ವಿಳಾಸ	—	ಶ್ರೀ ಸಿದ್ಧಗಂಗಾ ಮಠ ತುಮಕೂರು ಜಿಲ್ಲೆ
6]	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗಳ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳದ ಶೇ. ೧ ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರಾದವರ ಹೆಸರು ಮತ್ತು ವಿಳಾಸ	—	ಶ್ರೀ ಶಿವಕುಮಾರ ಸ್ವಾಮಿಗಳು ಶ್ರೀ ಸಿದ್ಧಗಂಗಾ ಮಠ ತುಮಕೂರು ಜಿಲ್ಲೆ

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು ನಾನು, ಹೆಚ್. ಬಿ. ಗಂಗಾಧರಯ್ಯ, ಘೋಷಿಸುತ್ತೇನೆ.

[ಸಹಿ] **ಹೆಚ್. ಬಿ. ಗಂಗಾಧರಯ್ಯ**

ಪ್ರಕಾಶಕ

"ಸಿದ್ಧಗಂಗಾ" ಶ್ರೀ ಸಿದ್ಧಗಂಗಾ ಮಠ

ತುಮಕೂರು ಜಿಲ್ಲೆ

ದಿನಾಂಕ: **1-3-77**

ಸತ್ಯಶೋಧನೆ

ವಿಜ್ಞಾನದ ಇತಿಹಾಸವೇ ಅದರ ಇತಿಮಿತಿಗಳನ್ನು ಸಾರುತ್ತ ಬಂದಿವೆ. ಈ ವಿಜ್ಞಾನದ ಆಚೆ ಇರುವ ವಿಜ್ಞಾನವನ್ನು ನಮ್ಮ ಸಾಧುಸಂತರು ಯೋಗಿಗಳು ಅರಿತು ಅನುಭವಿಸಿ ಶಕ್ಯವಿರುವಷ್ಟು ವಿವರಿಸುತ್ತ ಬಂದಿದ್ದಾರೆ, ಯಾವ ದಾರಿ ಗುಂಟ ಹೇಗೆ ಹೋದರೆ ಯಾರು ಬೇಕಾದರೂ ಅವರ ಅನುಭವವನ್ನು ಪಡೆಯ ಬಹುದು ಎಂಬುದನ್ನು ತಿಳಿಸಿ ಹೇಳಿದ್ದಾರೆ. ನಮ್ಮ ಈ ಶತಮಾನದಲ್ಲಿಯೇ ಅತ್ಯಂತ ಧೀಮಂತರೂ ಪ್ರಚಂಡ ನಾಸ್ತಿಕರೂ ಆಗಿದ್ದ ವಿವೇಕಾನಂದರು ರಾಮಕೃಷ್ಣ ಪರಮಹಂಸರ ಸಂಪರ್ಕದಿಂದ ಬ್ರಹ್ಮಸಂಸ್ಪರ್ಶವನ್ನು ಹೊಂದಿದರು. ತಂದೆಯ ಇಚ್ಛೆಯಂತೆ ಪೂರ್ತಿಯಾಗಿ ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿ ಆಧುನಿಕ ವಿದ್ಯಾವಿಭೂಷಿತರಾದ ಅರವಿಂದರು ಭಾರತಕ್ಕೆ ಮರಳಿ ಬಂದ ದಿನವೇ ಮಹತ್ತರ ಶಾಂತಿಯ ಅನುಭವಪಡೆದರು, ಮುಂದೆ ಅಲಿಪುರದ ಸೆರೆಮನೆಯಲ್ಲಿ 'ಎಲ್ಲವೂ ವಾಸುದೇವ'ಎಂಬ ಸಾಕ್ಷಾತ್ಕಾರ ಪಡೆದರು. ಇವೆಂಥ ಪವಾಡಗಳು! ಇಂಥವು ಇನ್ನೂ ಎಷ್ಟೋ ನಡೆದಿವೆ. ಇವನ್ನು ನಾವು ನಂಬದಿರಬಹುದೇ?

[6ನೇ ಪುಟದಿಂದ]

ನಂಬದಿರುವುದೇ. ಒಂದು ಮೂಢನಂಬಿಕೆಯಾಗುವುದಿಲ್ಲವೇ ?

ಇವು ಕೆಲವು ಸಾಧು ಸಂತರ ಜೀವನದಲ್ಲಿ ಸಹಜ ಸಂಗತಿಗಳು, ಸಾಮಾನ್ಯರಾದ ನಮಗೆ ಮಾತ್ರ ಸೋಜಿಗಗಳು. ಕೆಲವರು ಅವನ್ನು ಪ್ರಕಟಗೊಳಿಸುವುದಿಲ್ಲ, ಕೆಲವರು ಜನ ಒಳ್ಳೆಯದಾರಿಗೆ ಬರಲಿ ಎಂಬ ಸದುದ್ದೇಶದಿಂದ ಅವನ್ನು ಪ್ರಕಟಗೊಳಿಸುತ್ತಾರೆ. ಅವರ ಹತ್ತಿರ ಶ್ರದ್ಧೆಯಿಂದ ವಿನಯದಿಂದ ಹೋದಾಗ ಅವು ಸುಂದರವಾದ ಬಳ್ಳಿಯಲ್ಲಿ ಹೂಗಳು ಅರಳಿ ತೋರುವಂತೆ ಅವರಲ್ಲಿ ಒಡಮೂಡಿ ತೋರುತ್ತದೆ. ಅವು ಹೇಗೆ ಯಾಕೆ ಎಂತು ಎಂದು ನಮಗೆ ತಿಳಿಯುವುದಿಲ್ಲ, ನಾವು ಅವನ್ನು ನಮ್ಮ ಪರಿಮಿತ ಬುದ್ಧಿಯಿಂದ ಒರೆಗೆ ಹಚ್ಚಲಾರೆವು.

ಮನುಷ್ಯನು ಇಂದು ಅನೇಕ ವಿಷಯಗಳನ್ನು ತಿಳಿದಿದ್ದಾನೆ ಹೊಸ ಹೊಸ ಶೋಧಗಳನ್ನು ಮಾಡಿದ್ದಾನೆ, ಚಂದ್ರಲೋಕದಲ್ಲಿ ಇಳಿದು ಬಂದಿದ್ದಾನೆ. ಆದರೂ ಸತ್ಯವು ಪೂರ್ತಿಯಾಗಿ ಅವನ ಕೈಗೆ ಎಟುಕದೆ ಉಳಿದಿದೆ ಎಂಬ ಸತ್ಯವನ್ನು ಅವನು ಒಪ್ಪಿಕೊಳ್ಳಬೇಕು.

ಶ್ರೀ ಕ್ಷೇತ್ರದಲ್ಲಿ ಜಾತ್ರೆ

ಶ್ರೀ ಕ್ಷೇತ್ರದ ಮಠದ ಮುಂಭಾಗದಲ್ಲಿ ತೋಂಟದಾರ್ಯ ವಿದ್ಯಾವರ್ಧಿನೀ ಸಭಾದ ಆಶ್ರಯದಲ್ಲಿ ಪ್ರತಿದಿನ ಸಂಜೆ ಶಿವಕಥಾ ಕಾಲಕ್ಷೇಪ, ಜನಪದ ಗೀತೆಗಳು, ಲಾವಣಿಗಳು, ಭಾವಗೀತೆಗಳು, ವಚನಗಾಯನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಏರ್ಪಾಡಾಗಿದ್ದವು.

ಜಾತ್ರೆಯ ಅಂಗವಾಗಿ ಏರ್ಪಡಿಸಲಾಗಿದ್ದ ಉತ್ತಮ ರಾಸುಗಳ ಪ್ರದರ್ಶನದಲ್ಲಿ ಆಯ್ಕೆಯಾದ ಉತ್ತಮ ರಾಸು

[16ನೇ ಪುಟದಿಂದ]

ಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ಬಾರಿಯ ವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭವನ್ನು ಬೆಂಗಳೂರು ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಬಿ. ಟಿ. ಸೋಮಣ್ಣನವರು ಶ್ರೀ ಶ್ರೀಗಳವರ ದಿವ್ಯ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಉತ್ತಮ ಪ್ರದರ್ಶನ ವ್ಯವಸ್ಥೆಗಾಗಿ ಮಳಿಗೆಗಳಿಗೆ ಬಹುಮಾನ ವಿತರಣೆ ಮಾಡಲಾಯಿ.

ಶಕ್ತಿ-ಉಗಮ ಮತ್ತು ವಿಕಾಸ

ಇತ್ತೀಚೆಗೆ ಸೌರಶಕ್ತಿಯು ಪ್ರಧಾನಶಕ್ತಿಯಾಗಿ ಪರಿಣಮಿಸತೊಡಗಿದೆ. ಅದನ್ನು ನಿಯಂತ್ರಿಸಿ ದಿನಬಳಕೆಗೆ ಉಪಯೋಗಿಸಲು ಭರದಿಂದ ಸಂಶೋಧನೆಗಳು ನಡೆಯುತ್ತವೆ. ಕ್ರಿ. ಶ. 2000ದ ಸುಮಾರಿಗೆ ಸೌರ ಶಕ್ತಿಯು ವಿಶ್ವದ ಪ್ರಮುಖ ಶಕ್ತಿಯಾಗಿ ಪರಿಣಮಿಸಿದರೆ ಆಶ್ಚರ್ಯವೇನಿಲ್ಲ.

ಉಪಯೋಗಿಸಿದಂತೆ ಶಕ್ತಿಯ ಮೂಲಗಳು ದಿನೇ ದಿನೇ ಕ್ಷೀಣವಾಗುತ್ತ ಹೋಗುತ್ತವೆ. ನೈಸರ್ಗಿಕ ಶಕ್ತಿ ಮೂಲಗಳಾದ ಅನಿಲ, ತೈಲ, ಕಲ್ಲಿದ್ದಲು ಮುಂತಾದವುಗಳನ್ನು ಇದೇ ರೀತಿ ಉಪಯೋಗಿಸುತ್ತ ಹೋದರೆ,

[23ನೇ ಪುಟದಿಂದ]

ಅವುಗಳ ನಿಕ್ಷೇಪ ಕರಗಿ ಹೋಗುವ ದಿನಗಳು ದೂರವಿಲ್ಲ. ಆದಕ್ಕಾಗಿ ವಿಶ್ವದ ರಾಷ್ಟ್ರಗಳೆಲ್ಲ ತಮ್ಮ ಶಕ್ತಿಯ ನಿಕ್ಷೇಪಗಳನ್ನು ಬಹು ಮಿತವ್ಯಯದಿಂದ ಬಳಸಲು ಯತ್ನಿಸಬೇಕು. ಮಾನವ ಹೊಸ ಹೊಸ ಶಕ್ತಿಯ ಮೂಲಗಳ ಅನ್ವೇಷಣೆ ಮತ್ತು ಸೃಷ್ಟಿಗಾಗಿ ನಡೆಯಿಸುತ್ತಿದ್ದ ಹೋರಾಟ ಇಂದು ನಿನ್ನಿನದಲ್ಲ. ಭೂಮಿಯ ಮೇಲೆ ತನ್ನ ಅಸ್ತಿತ್ವ ಉಂಟಾದಂದಿನಿಂದ ಈ ಹೋರಾಟ ನಡೆದಿದೆ ಮತ್ತು ಭೂಮಿಯ ಮೇಲೆ ಅವನ ಅಸ್ತಿತ್ವವಿರುವವರೆಗೆ ನಡದೇ ಇರುತ್ತದೆ.

Made out of the Finest Materials

MANGALORE GANESH BEEDIES

Smokers cannot afford to miss them

DAILY SALES EXCEED 7 CRORE BEEDIES

Head Office:

MANGALORE GANESH BEEDI WORKS
VINOBA ROAD : : MYSORE–570 005

Telephone: 28241

Telegrams: 'AROMA'

"SIDDAGANGA" Monthly, Sree Siddaganga Mutt. KRN Q-9
gistered with the Registrar of News papers for India under No. 17139/69

AGRICULTURAL PRODUCE MARKET COMMITTEE, TUMKUR

ESTD : 1952

This Market is one of the important Marketing Centre especially for Tamarind, Soapnut, Ragi, Oilseeds and Arecanuts in Karnataka State

The Annual Turnover and Income of the Market Committee are as follows

	Turnover	Income
	(Amount in Lakhs)	
1973–74	687·96	5·03
1974–75	562·21	5·94
1975–76	596·18	7·04

1 Members of the Market Committee :

i) Sri G.S. Basavaraj, B.Sc.,B.L.,Chairman Gangasandra, Tumkur Taluk
ii) Sri B. Rudraiah, Vice-Chairman Honnenahalli, Tumkur Taluk
iii) Sri T. L. Narasimhasastry, Hullenahalli, Tumkur Taluk
iv) Sri C. V. Gangaiah Channenahalli, Tumkur Taluk
v) Sri Chickrangaiah Kodegenahalli, Tumkur Taluk
vi) Sri T. H. Hanumanthrayappa Thovinkere, Koratagere Taluk
vii) Sri Y. N. Ramaiah Yadagere, Koratagere Taluk

2 Traders Constituency :

viii) Sri N. R. Jagadeesh Mandypet, Tumkur
ix) Sri K. S. Siddanna New Mandypet, Tumkur

3 Commission Agents Constituency :

x) Sri G. H. Chandreshakaraiah New Mandypet, Tumkur

4 Taluk Agricultural produce Marketing Co-operative Society Limited

xi) Sri K. L. Narasimhaiah Kyathsandra, Tumkur Taluk

5 producers Farm Society :

xii) Sri K. Kadraiah Gandhigrama, Koratagere Taluk

6 Local Body :

xiii) Sri S. Rasheed City Municipal Council, Tumkur

7 Government Nominee :

xiv) Sri Venkatesh Reddy District Marketing Officer, Tumkur District, Tumkur

Sri G. S. Talkal Secretary

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾ ಮಠ.